ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 42 | ಅಕ್ಟೋಬರ್ 14, 1984 | ಬೆಲೆ 60 ಪೈಸೆ.

ದೇಶ ಗಂಡಾಂತರದ ಅಂಚಿನಲ್ಲಿದೆ, ಜೋಕೆ

"ನಮ್ಮದೊಂದು ಜಾತ್ಯಾತೀತ ಪ್ರಜಾಪ್ರಭುತ್ವ, ಮತೀಯ ಹಾಗೂ ಅದಕ್ಕೆ ಸಂಬಂಧ ಪಟ್ಟ ತತ್ವಗಳನ್ನು ಅದರಲ್ಲಿ ತರುವುದನ್ನು ನಾವು ವಿರೋಧಿಸುತ್ತೇವೆಂದು ಹಿರೇ ಬಂಡವಾಳಶಾಹಿ ಮುಖಂಡತ್ವ ಎತ್ತರದಿಂದ ಬೊಬ್ಬಿಡುತ್ತಿದೆ. ಆದರೆ ನಿಜ ಸಂಗತಿ ಏನೆಂದರೆ, ಜಾತ್ಯಾತೀತ ವಿರೋಧವಾದ ಈ ಪ್ರವೃತ್ತಿಯನ್ನು ಪರಿಣಾಮಕಾರಿಯಾಗಿ ವಿರೋಧಿಸುವ ಬದಲು, ಬಂಡವಾಳಶಾಹಿಯು ಅವುಗಳಿಗೆ ಸವಲತ್ತುಗಳನ್ನು ಕೊಟ್ಟು ಅವುಗಳನ್ನು ಬಲಪಡಿಸುತ್ತಿದೆ ಅದರ ನಾಯಕರು ಸ್ಥಿರವಾದ ಜಾತ್ಯಾತೀತ ನಿಲುವೆಯನ್ನು ವಹಿಸುವುದಿಲ್ಲ, ತಾವೇ ಮತೀಯ ಶ್ರದ್ಧೆ—ನಂಬಿಕೆಗಳಿಗೆ ಬಲಿಯಾಗುತ್ತಾರೆ. ಜಾತ್ಯಾತೀತತೆಯ ಇಡಿಯ ಭಾವವನ್ನೇ ವಿರೂಪಗೊಳಿಸಲು ಯತ್ನಿಸುತ್ತಾರೆ. ಧರ್ಮ ಮತ್ತು ರಾಜಕಾರಣಗಳನ್ನು ಪ್ರತ್ಯೇಕಗೊಳಿಸದೆ, ಜಾತ್ಯಾತೀತತೆ ಎಂದರೆ ಜನರ ರಾಜಕೀಯ ಜೀವನದಲ್ಲಿ ಹಸ್ತಕ್ಷೇಪ ನಡೆಸಲು ಎಲ್ಲ ಮತ ಪಂಥಗಳಿಗೆ ಸರಿಸಮಾನ ಹಕ್ಕು ನೀಡುವುದಾಗಿದೆಂಬರ್ಥವನ್ನು ಜನರು ತಿಳಿದುಕೊಳ್ಳಬೇಕೆಂದು ಅವರು ಅಪೇಕ್ಷಿಸುತ್ತಾರೆ. ಹಲವು ಅಧಿಕೃತ ದಸ್ತಾವೇಜುಗಳಲ್ಲಿ ಬಂಡವಾಳಶಾಹಿಯ ಈ ದೃಷ್ಟಿಕೋನವನ್ನು ಸ್ಪಷ್ಟವಾಗಿ ಕಾಣಬಹುದು. ಬಹುಮತದ ಜಾತೀಯತೆಗೆ ಅವರು ಬಹಳ ಸವಲತ್ತುಗಳನ್ನು ಕೊಡುತ್ತಿದ್ದಾರೆ. ರಾಷ್ಟ್ರೀಯ ಭಾವೈಕ್ಯತೆಯ ಮಂಡಳಿಗಳನ್ನು ರಚಿಸುವಾಗ ಜನಸಂಘ, ಹಿಂದೂ ಮಹಾಸಭೆಯ ಪ್ರತಿನಿಧಿಗಳನ್ನು ಯಾವ ಸಂಕೋಚವೂ ಇಲ್ಲದೆ ಕೇಂದ್ರ ಸರ್ಕಾರ ನೇಮಿಸಿದ್ದರಿಂದ ಇದು ಖಚಿತವಾಗಿದೆ. ಅದೇ ವೇಳೆ ಹಿಂದೂಏತರ ಪ್ರತಿನಿಧಿಗಳನ್ನು ಬಹಳ ಎಚ್ಚರಿಕೆಯಿಂದ ದೂರವಿಡಲಾಗುತ್ತಿತ್ತು. ಇಷ್ಟರಲ್ಲೇ ನಿಲ್ಲದ, ಆಳುವ ಪಕ್ಷಗಳು ತಮ್ಮ ಸಂಕುಚಿತ ವರ್ಗಹಿತ ಸಾಧಿಸುವ ಸಲುವಾಗಿ ಜನಾಂಗಗಳ ಮತ್ತು ಮತ ಪಂಗಡಗಳೊಳಗಿನ ಭಿನ್ನಾಭಿಪ್ರಾಯಗಳನ್ನು ಕೆದರಿ ಉರಿ ಹಚ್ಚಲು ಹಿಂದು ಮುಂದು ನೋಡುವುದಿಲ್ಲ.

"ಆದ್ದರಿಂದ ಜಾತ್ಯಾತೀತ ತತ್ವಗಳ ಸ್ಥಿರವಾದ ಅನುಷ್ಠಾನಕ್ಕಾಗಿ ನಿರ್ದಾಕ್ಷಿಣ್ಯವಾಗಿ ಹೋರಾಟ ನಡೆಸುವುದು ನಮ್ಮ ಪಕ್ಷದ ಕರ್ತವ್ಯವಾಗಿದೆ. ಆ ತತ್ವದಿಂದ ಕಿಂಚಿತ್ ವಿಚಲಿತವಾದರೂ ಅದನ್ನು ಬಯಲುಗೊಳಿಸಿ ಹೋರಾಡಬೇಕು. ಅದು ಬಹು ಸಂಖ್ಯಾತರದ್ದಿರಲಿ ಅಥವಾ ಅಲ್ಪ ಸಂಖ್ಯಾತರದ್ದಿರಲಿ, ಪ್ರತಿಯೊಂದು ಧರ್ಮದವರಿಗೂ ಅವರವರಿಗೆ ಬೇಕಾದ ಮತವನ್ನು ನಂಬಿ ಅದನ್ನು ಅನುಷ್ಠಾನದಲ್ಲಿ ತರುವ ಅಥವಾ ನಂಬಿಕೆಯೇ ಇಲ್ಲದವರಿಗೂ ನಂಬಿಕೆ ಇಲ್ಲದೇ ಇರಲಿಕ್ಕೆ ಪಾರ್ಟಿ ಪೂರ್ಣ ಹಕ್ಕು ನೀಡುತ್ತದೆ. ಆದರೆ ರಾಷ್ಟ್ರದ ಆರ್ಥಿಕ, ರಾಜಕೀಯ, ಮತ್ತು ಸಾಮಾಜಿಕ ಮತ್ತು ಆಡಳಿತಾತ್ಮಕ ಜೀವನದಲ್ಲಿ ಮಾತ್ರ ಜಾತೀಯತೆಯ ಎಲ್ಲ ತರದ ಕೈವಾಡವನ್ನು ಪಕ್ಷ ವಿರೋಧಿಸುತ್ತದೆ. ದೇಶದ ಸಾರ್ವಜನಿಕ ಜೀವನದಲ್ಲಿ ಯಾವುದೇ ಮತೀಯ ಗುಂಪಿನ ಮುಖಂಡರು ಹಸ್ತಕ್ಷೇಪ ಮಾಡುವುದನ್ನು ವಿರೋಧಿಸಬೇಕು. ಅದೇ ಸಮಯದಲ್ಲಿ ಜಾತ್ಯಾತೀತತೆಯ ತತ್ವಗಳನ್ನು ಸ್ಥಿರವಾಗಿ ಅನ್ವಯಿಸಬೇಕಾದರೆ ಮಾತ್ರ ತಮ್ಮ ನ್ಯಾಯವಾದ ಹಕ್ಕುಗಳನ್ನು ರಕ್ಷಿಸಿ ಉಳಿಸಿಕೊಳ್ಳಲು ಸಾಧ್ಯವೆಂಬುದನ್ನು ಅಲ್ಪ ಸಂಖ್ಯಾತ ಗುಂಪುಗಳಿಗೆ ಮನದಟ್ಟು ಮಾಡಿ ಕೊಡುವುದು ಅಗತ್ಯ."
[ಸಿ. ಪಿ. ಐ. [ಎಂ] ಕಾರ್ಯಕ್ರಮದಿಂದ]

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಾರ್ಟಿ 1964 ರಲ್ಲಿ ಸ್ವೀಕಾರಮಾಡಿದ ಕಾರ್ಯಕ್ರಮದಲ್ಲಿ ಬಂಡವಾಳಶಾಹಿ ವರ್ಗ ಹಾಗೆಯೇ ಮತೀಯ ಮುಖಂಡರು ಜಾತೀಯತೆಯನ್ನು ಯಾವ ರೀತಿ ಬೆಳೆಸುತ್ತಾರೆ. ರಾಜಕಾರಣದಲ್ಲಿ ಅದನ್ನು ಯಾವ ರೀತಿ ಉಪಯೋಗ ಮಾಡುತ್ತಾರೆಂಬುದನ್ನು ಮೇಲೆ ಸ್ಪಷ್ಟಪಡಿಸಲಾಗಿದೆ. ಸಿ. ಪಿ. ಐ. [ಎಂ] ಕಾಯಕ್ರಮದಲ್ಲಿ ಹೇಳಿರುವ ನಿರೂಪಣೆ ಎಷ್ಟು ನಿಜವಾಗಿದೆಂಬುದನ್ನು ದೇಶದಲ್ಲಿ ಹಾಗೆಯೇ ಕರ್ನಾಟಕದಲ್ಲಿ ಮೇಲಿಂದ ಮೇಲೆ ಉದ್ಭವಿಸುತ್ತಿರುವ ಜಾತೀಯ ಗಲಭೆ, ದೊಂಬಿಗಳು ತೋರಿಸಿ ಕೊಡುತ್ತಿವೆ.

ಎಂದಿಗೂ ಮತೀಯ ಗಲಭೆಯನ್ನು ಕಾಣದ ಬೆಳಗಾವಿಯಲ್ಲಿ ಹಿಂದೂ—ಮುಸ್ಲಿಂ ದಂಗೆ ನಡೆದಿದೆ. ಹೈದರಾಬಾದ್, ಮುಂಬಯಿ, ಭೀವಂಡಿ, ಹುಬ್ಬಳ್ಳಿ ಹಾಗೆಯೇ ದೇಶದ ಹಲವಾರು ರಾಜ್ಯಗಳಲ್ಲಿ ಜಾತೀಯ ಕಲಹ ನಡೆದು ಜೀವ—ಆಸ್ತಿಗಳಿಗೆ ಅಪಾರ ನಷ್ಟವಾಗುವುದನ್ನು ನೋಡಿದ್ದೇವೆ, ನೋಡುತ್ತಿದ್ದೇವೆ.

ಇದರ ಜೊತೆಯಲ್ಲಿಯೇ ಸಾಮ್ರಾಜ್ಯಶಾಹಿಗಳು ಛಿದ್ರಕಾರಿ ಶಕ್ತಿಗಳ ಸಹಾಯದಿಂದ ಜನರಲ್ಲಿ ಮತೀಯ, ಧರ್ಮೀಯ, ವಿಭಾಗೀಯ—ಹೀಗೆ ನಾನಾ ತರದ ಉದ್ರೇಕಕಾರಿ ಭಾವನೆಗಳನ್ನು ಕೆರಳಿಸುತ್ತಿದ್ದಾರೆ. ಒಂದು ಕೋಮು ಮತ್ತೊಂದು ಕೋಮಿನ ವಿರುದ್ಧ, ಒಂದು ಪಂಗಡ, ಒಳಜಾತಿ ಮತ್ತೊಂದು ಪಂಗಡ, ಒಳಜಾತಿ ವಿರುದ್ಧ ಹೋರಾಡುವಂತೆ ಮಾಡುತ್ತಿದೆ. ಅಸ್ಸಾಂ, ಪಂಜಾಬ್ ಹಾಗೆಯೇ ದೇಶದ ಇತರೆಡೆಗಳಲ್ಲಿ ಸತತವಾಗಿ ಹುಟ್ಟಿಕೊಳ್ಳುತ್ತಿರುವ ಇಂಥ ಗಲಭೆಗಳಿಗೆಲ್ಲ ಅಮೇರಿಕ ಮತ್ತು ಇತರ ಸಾಮ್ರಾಜ್ಯಶಾಹಿಗಳೂ, ಕ್ರಿಶ್ಚನ್ ಮಿಶಿನರಿಗಳೂ, ದುಭ್ಯಾ, ಕುವಾಯತ್‌ಗಳಂಥ ಎಣ್ಣೆ ಸಾಮ್ರಾಜ್ಯ ಸರ್ಕಾರಗಳೂ, ಆ ದೇಶಗಳಿಂದ ಸುರಿದು ಬರುತ್ತಿರುವ ಅಪಾರ ಹಣವೂ ಇಂಥ ಕೋಮು—ಮತೀಯ ಗಲಭೆಗಳಿಗೆ ಕಾರಣೀಭೂತವಾಗಿದೆಂಬ ಸಂಗತಿ ಜಗಜ್ಜಾಹೀರವಾಗಿದೆ.

ನಮ್ಮ ದೇಶದ ಒಗ್ಗಟ್ಟನ್ನು, ಐಕ್ಯತೆಯನ್ನು ಮುರಿದು, ಕುಂಠಿತ ಗೊಳಿಸಿ ಸಾಮ್ರಾಜ್ಯಶಾಹಿ ಪ್ರಭುತ್ವ ಹೇರುವುದೇ ಅವರೆಲ್ಲರ ಮಹಾತ್ವಾಕಾಂಕ್ಷೆಯಾಗಿದೆ. ಈ ನಿಜ ಸಂಗತಿ ಆಳುವ ಕಾಂಗ್ರೆ ಪಕ್ಷಕ್ಕೆ ಇಂದಿರಾ ಗಾಂಧಿಗೆ ತಿಳಿದಿದ್ದರೂ ಕೂಡ, ದೇಶದಲ್ಲಿ ಬೆಳೆದು ಬರುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಅಂಜಿ, ತನ್ನ ಪಕ್ಷದ ಅಧಿಕಾರವನ್ನು ಭದ್ರವಾಗಿ ಉಳಿಸಿಕೊಳ್ಳುವ ದುರುದ್ದೇಶದಿಂದಲೇ ವಿದೇಶೀ ಸಾಮ್ರಾಜ್ಯಶಾಹಿಗಳ, ಬಂಡವಳದಾರಿ ಸರಕಾರಗಳ ಹಸ್ತಕ್ಷೇಪವನ್ನು ಬಯಲಿಗೆಳೆದು ಅದರ ವಿರುದ್ಧ ಆಂದೋಲನ ನಡೆಸಲಿಕ್ಕೆ ಇಂದಿರಾ ಗಾಂಧಿ ಹಾಗೂ ಆಕೆಯ ಸರಕಾರ ತಯಾರಿಲ್ಲ. ಅದರ ಬದಲಾಗಿ ಈ ದಂಗೆಗಳಿಗೆ ಕಾರಣೀಭೂತರಾದ ಜಾತೀಯ-ಮತೀಯ-ಛಿದ್ರಕಾರಿ ಶಕ್ತಿಗಳನ್ನುಪಯೋಗ ಮಾಡಿಕೊಳ್ಳುತ್ತಿರುವುದು ಸ್ಪಷ್ಟವಾಗಿದೆ. ಮಹಾರಾಷ್ಟ್ರ ವಿಧಾನ ಪರಿಷತ್ ಚುನಾವಣೆಯಲ್ಲಿ ತಮ್ಮ ಉಮೇದ್ವಾರರನ್ನು ಗೆಲ್ಲಿಸಲು ಮತಪಡೆಯುವ ಸಲುವಾಗಿ ಭೀವಂಡಿ ಗಲಭೆಗೆ ಕಾರಣೀಭೂತರಾದ ಶಿವಸೇನೆ ಶಾಸಕರನ್ನು ಸ್ಥಾನಬದ್ಧತೆಯಿಂದ ಬಿಡುಗಡೆ ಮಾಡಲಾಗಿತ್ತು. ಕಾಂಗ್ರೆ ಬೆಂಬಲಿತ ಆಂಧ್ರದ 30 ದಿವಸದ ಭಾಸ್ಕರರಾವ್ ಸರಕಾರ ಶಾಸನಸಭೆಯಲ್ಲಿ ತನ್ನ ಬಹು

(8ನೇ ಪುಟ ನೋಡಿ)

ಹೆಗಡೆ - ಪಾಟೀಲರ ಭೇಟಿ

ಕರ್ನಾಟಕ-ಮಹಾರಾಷ್ಟ್ರಗಳ ಗಡಿ ಸಮಸ್ಯೆಗಳ ಕುರಿತು ಚರ್ಚಿಸಲು ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆ ಮತ್ತು ವಸಂತ ದಾದಾ ಪಾಟೀಲರು ಭೆಟ್ಟಿಯಾಗಿದ್ದರು. ಸುದೀರ್ಘ ಚರ್ಚೆ ನಡೆಸಿದರು. ಕೆಲವು ನಿರ್ಣಯಗಳನ್ನು ಕೈಕೊಂಡರು.

ಭಾಷಾವಾರು ರಾಜ್ಯ ರಚನೆಯಾದಂದಿನಿಂದಲೂ ಮಹಾರಾಷ್ಟ್ರದ ಬಹುತೇಕ ರಾಜಕೀಯ ಪಕ್ಷಗಳು ಬೆಳಗಾವಿ ಕಾರವಾರ ಮೊದಲಾದ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಬೇಕೆಂದು ಒತ್ತಾಯ ಮಾಡುತ್ತಲೇ ಬಂದಿವೆ. ಮಹಾರಾಷ್ಟ್ರದಲ್ಲಷ್ಟೇ ಅಲ್ಲ ಬೆಳಗಾವಿ ಕಾರವಾರಗಳಲ್ಲೂ ತೀವ್ರ ಚಳುವಳಿಗಳು ನಡೆದಿವೆ. 1956 ರಿಂದಲೂ ಈ ಸಮಸ್ಯೆಯನ್ನು ಜೀವಂತ ಉಳಿಸಲು ಮಹಾರಾಷ್ಟ್ರದ ಒಂದಲ್ಲೊಂದು ಪಕ್ಷ—ಸಂಸ್ಥೆ ಪ್ರಯತ್ನಿಸುತ್ತಲೇ ಇದೆ. ಚುನಾವಣೆಗಳು ಬಂದಾಗಲಂತೂ ರಾಜ್ಯ ಮಂತ್ರಿ ಮಂಡಲದ ಮೇಲೆ ಹೆಚ್ಚಿನ ಒತ್ತಾಯ ತರಲಾಗುತ್ತಿದೆ ಗಡಿ ಸಮಸ್ಯೆಯ ಪರಿಹಾರಕ್ಕೆ ಲೋಕಸಭೆ ಚುನಾವಣೆಯನ್ನು ಮುನ್ನಿರೀಕ್ಷಿಸಿಯೇ ವಸಂತ ದಾದಾ ಪಾಟೀಲರು ಹೆಗಡೆಯವರ ಜೊತೆ ಚರ್ಚಿಸಲು ಧಾವಿಸಿದ್ದಾರೆ.

ಗಡಿ ಸಮಸ್ಯೆಯ—ಅದು ಮಹಾರಾಷ್ಟ್ರ, ಕರ್ನಾಟಕ, ಕೇರಳ, ಆಂಧ್ರ, ಒರಿಸ್ಸಾ, ಪಂಜಾಬ್ ಅಥವಾ ಹರಿಯಾಣವೇ ಇರಲಿ,—ಪರಿಹಾರ ಕಂಡು ಹಿಡಿದು, ಬಗೆ ಹರಿಸುವ ಜವಾಬ್ದಾರಿ ಕೇಂದ್ರ ಸರಕಾರದ್ದೆಂಬ ವಿಷಯ ವಸಂತ ದಾದಾ ಪಾಟೀಲರಿಗೆ ಚೆನ್ನಾಗಿ ಗೊತ್ತಿರಬೇಕು ಕರ್ನಾಟಕ ಸರಕಾರದ ನಿಲುವು ಸ್ಪಷ್ಟವಾಗಿರುವಾಗ ತಮ್ಮಿಬ್ಬರೊಳಗಿನ ಚರ್ಚೆಯಿಂದ ಗಡಿ ಪ್ರಶ್ನೆ ಬಗೆಹರಿಯಲಾರದೆಂದು ಮಹಾರಾಷ್ಟ್ರದ ಮುಖ್ಯ ಮಂತ್ರಿ ತಿಳಿದಿರಲೇಬೇಕು. ಆದರೂ ಜನರ ಒತ್ತಡಕ್ಕಾಗಿ ಬೆಂಗಳೂರು ದರ್ಶನವಾಯಿತು.

ಹಿಂದಿನ ಕಾಂಗ್ರೆಸ್ ಮುಖ್ಯಮಂತ್ರಿಗಳ ಪಥ ತುಳಿಯದೆ ರಾಮಕೃಷ್ಣ ಹೆಗಡೆಯವರು ಭೇಟಿಯ ಮುನ್ನ ಎಲ್ಲ ರಾಜಕೀಯ ಪಕ್ಷಗಳ ಕಾಂಗ್ರೆಯನ್ನೊಳಗೊಂಡು—ಮುಖಂಡರ ಸಭೆ ಕರೆದು ಸಲಹೆ ಕೇಳಿಕೊಂಡಿರುವುದು ಸ್ವಾಗತಾರ್ಹ. ಕಾಂಗ್ರೆಯ್ಯನ್ನೊಳಗೊಂಡು ಎಲ್ಲರೂ ಮಹಾರಾಷ್ಟ್ರ ವರದಿಗಷ್ಟೇ ತಮ್ಮ ಅಭಿಪ್ರಾಯ ಸೀಮಿತಗೊಳಿಸಿದ್ದರು ಆದರೆ ಸಿ. ಪಿ. ಐ. (ಎಂ) ಮುಖಂಡರಾದ ಎನ್. ಎಲ್. ಉಪಾಧ್ಯಾಯರು ಮಹಾಜನ ವರದಿಯನ್ನು ತಮ್ಮ ಪಕ್ಷ ಒಪ್ಪಿಕೊಳ್ಳುವುದಿಲ್ಲೆಂದೂ, ಮಹಾರಾಷ್ಟ್ರದ ಗಡಿ ಪ್ರಶ್ನೆ ಎತ್ತಿದರೆ, ಆಂಧ್ರ—ಕೇರಳಗಳ ಸಮಸ್ಯೆ ಉದ್ಭವಿಸುತ್ತದೆಂದೂ, ಸದ್ಯದಲ್ಲಿ ಗಡಿ ಪ್ರಶ್ನೆ ತುರ್ತಿನ ಸಮಸ್ಯೆಯಾಗುಳಿಯದೆ ಗಡಿ ಪ್ರದೇಶದ ಜನರ ಸೌಲಭ್ಯತೆಗಳ, ಆ ಪ್ರದೇಶದ ಅಭಿವೃದ್ಧಿಯ, ಮಕ್ಕಳ ಶಿಕ್ಷಣದ, ನೌಕರಿಯ ಸಮಸ್ಯೆ ಬಗೆಹರಿಸುವುದು ಅತ್ಯಗತ್ಯವೆಂದೂ, ಅಂಥ ಸಮಸ್ಯೆಗಳ ಕುರಿತು ಸವಿಸ್ತಾರ ಚರ್ಚೆ ನಡೆಯುವುದು ಅಗತ್ಯವೆಂದೂ ಒತ್ತಿ ಹೇಳಿದರು.

ಈ ಭೇಟಿಯಿಂದ ಗಡಿ ಪ್ರದೇಶದ ಜನರು ಎದುರಿಸುತ್ತಿರುವ ಜೀವಂತ ಸಮಸ್ಯೆಗಳಿಗೆ ಸ್ವಲ್ಪ ಮಟ್ಟಿನ ಪರಿಹಾರ ಸಿಕ್ಕಂತಾಗಿದೆ. ಗಡಿ ಪ್ರದೇಶಗಳಲ್ಲಿ ಕನ್ನಡ ಶಾಲೆಗಳನ್ನು ತೆರೆಯಲು ಸರಕಾರದ ಪೂರ್ವ ಅನುಮತಿ ಪಡೆಯಬೇಕೆಂಬ ಮಹಾರಾಷ್ಟ್ರ ಸರಕಾರ ಹಾಕಿದ್ದ ನಿರ್ಬಂಧವನ್ನು ಹಿಂತೆಗೆದುಕೊಳ್ಳಲು ವಸಂತರಾವ್ ದಾದಾ ಪಾಟೀಲರು ಒಪ್ಪಿ ಕಳೆದ ಐದು ವರ್ಷಗಳಿಂದ ಕನ್ನಡ ಮಕ್ಕಳಿಗಾದ ಅನ್ಯಾಯವನ್ನು ಸರಿಪಡಿಸಲು ಸಾಧ್ಯವಾಯಿತು. ಅದರಂತೆಯೇ ಜತ್ತ, ಗದಿ ಹಿಂಗಳಗಿ ಅಕ್ಕಲ ಕೋಟ ಮೊದಲಾದ ಮಹಾರಾಷ್ಟ್ರದಲ್ಲಿರುವ ಕನ್ನಡ ಬಹುಮತ ವಿರುವ ಪ್ರದೇಶಗಳಲ್ಲಿ ಯಾವುದೇ ರೀತಿಯ ಹೇಳಿಕೊಳ್ಳುವಂತ ಅಭಿವೃದ್ಧಿ ಕೆಲಸಗಳು ನಡೆಯಲಾರದಾಗಿ ಜನತೆಗೆ ಅಪಾರ ತೊಂದರೆಯಾಗಿದ್ದು, ಅಂಥ ಕಾರ್ಯ ಕೈಗೊಳ್ಳುವ ಒಟ್ಟಭಿಪ್ರಾಯವೂ ಮೂಡಿಬಂದಿರುವುದು ಸ್ವಾಗತಾರ್ಹ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷ ಈ ನಿರ್ಣಯಗಳನ್ನು ಸ್ವಾಗತಿಸುತ್ತದೆ.

'ಹೊಸ ಕರ್ನಾಟಕ' ರೈತ ಸಮಾವೇಶ — ಒಂದು ವಿಮರ್ಶೆ

ಅಕ್ಟೋಬರ್ 8ರಂದು ಬೆಂಗಳೂರಿನಲ್ಲಿ ಜರುಗಿದ ರುದ್ರಪ್ಪನವರ ಅಧ್ಯಕ್ಷತೆಯ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದ ಸಮಾವೇಶವು 'ಹೊಸ ಕರ್ನಾಟಕ' ದ ಸ್ಥಾಪನೆಯ ಪ್ರತಿಜ್ಞೆ ಸ್ವೀಕರಿಸಿದೆ. ಮಧ್ಯಾಹ್ನದ ವೇಳೆಗೆ ಹಸಿರು ಟವಲ್ ಸುತ್ತಿದ ರೈತರನ್ನು ಹೊತ್ತ ಸುಮಾರು ಸಾವಿರಕ್ಕೂ ಮೇಲ್ಪಟ್ಟು ವಾಹನಗಳು ನಗರವನ್ನು ತಲುಪಿದವು. ಈ ಸಮಾವೇಶಕ್ಕೆ ಮುಖ್ಯವಾಗಿ ಹಾಸನ, ಮಂಡ್ಯ, ಶಿವಮೊಗ್ಗ ಮೊದಲಾದ ಜಿಲ್ಲೆಗಳಿಂದ ಮಂದಿಯನ್ನು ಕರೆತರಲಾಗಿತ್ತು. ಸ್ವಲ್ಪ ಮಂದಿ ಮಹಿಳೆಯರೂ ಬಂದಿದ್ದರು. ಭರ್ಜರಿ ವೆಚ್ಚದ ಈ ಅದ್ದೂರಿ ಸಮಾವೇಶವು ಕೇವಲ ಒಂದು ತಾಸಿನೊಳಗೇ ಮುಕ್ತಾಯವಾಯಿತು. ಬಂದವರಲ್ಲಿ ಬಹಳಷ್ಟು ಮಂದಿ ಸಮಾವೇಶದಲ್ಲಿ ಭಾಗವಹಿಸಲಿಲ್ಲ. ಸಂಘದ ಮುಖಂಡರ ಹೇಳಿಕೆಯ ಪ್ರಕಾರವೇ 25 ಲಕ್ಷ ಮಂದಿ ಬರುವ ನಿರೀಕ್ಷೆಯಿತ್ತು. ಮೊದಲೇ ಗೊತ್ತುಪಡಿಸಿದ ವಿಶೇಷ ಬಸ್, ಲಾರಿ, ವ್ಯಾನ್, ಕಾರುಗಳು ರೈತ ಸಮಾವೇಶಕ್ಕೆ ಪ್ರತಿನಿಧಿಗಳನ್ನು ಕರೆತಂದವು. ಈ ದೃಶ್ಯವು ಹಿಂದೊಮ್ಮೆ ಕರ್ನಾಟಕ ಪ್ರಗತಿಪರ ಜನತಂತ್ರ ರಂಗದನಾಯಕತ್ವದಲ್ಲಿ ನರಗುಂದದಿಂದ ಬೆಂಗಳೂರಿಗೆ ಕಾಲ್ನಡಿಗೆಯಲ್ಲೇ ಬಂದಿದ್ದ ರೈತ ಜನಸ್ತೋಮವನ್ನು ನೆನಪಿಗೆ ತಂದಿತು ಅಂದು ಅದು ಕಾಲ್ನಡಿಗೆಯ ಜಾಥವಾಗಿತ್ತು. ಇದು ಲಾರಿ, ಟ್ರಾಕ್ಟರ್ ಕಾರುಗಳ ನಡಿಗೆಯಾಗಿ ಕಂಡು ಬಂತು. ಕರ್ನಾಟಕ ರಾಜ್ಯ ರೈತ ಸಂಘದ ಈ ಸಮಾವೇಶವು ಗ್ರಾಮೀಣ ಶ್ರೀಮಂತ ರೈತ ವಿಭಾಗದ ಆರ್ಥಿಕ ಸಾಮಾಜಿಕ ಸ್ಥಾನ-ಮಾನಗಳ ಪ್ರಭಾವದಿಂದ ಸಂಘಟಿಸಲಾದ ಬಲ ಪ್ರದರ್ಶನವಾಗಿದೆಂದು ಸ್ಪಷ್ಟವಾಗಿ ಕಂಡು ಬರುತ್ತಿತ್ತು.

ಆಶ್ಚರ್ಯಕರವೆಂದರೆ ನರಗುಂದ, ನವಲಗುಂದ, ಬಾಗೇಪಲ್ಲಿ ಮುಂತಾದ ಹೆಸರುಗಳನ್ನು ರಾಜ್ಯ ರೈತ ಸಂಘದ ಹುತಾತ್ಮರ ಪಟ್ಟಿಯಲ್ಲಿ ಸೇರಿಸಿ ನರಗುಂದ ರೈತ ಬಂಡಾಯದ ಸಾಧನೆಯನ್ನು ತಮ್ಮದಾಗಿಸಿ ಕೊಳ್ಳಲಾಯಿತು ಇತರೆ ಯಾವುದೇ ರೈತ ಸಂಘಟನೆಗಳೊಂದಿಗೆ ಸೇರಿ ಸರ್ಕಾರದೊಡನೆ ಜಂಟಿ ಮಾತುಕತೆಗೆ ಸಿದ್ಧವಿಲ್ಲದ ಕರ್ನಾಟಕ ರಾಜ್ಯ ರೈತ ಸಂಘದ ನಾಯಕರು ರಾಜ್ಯದ ಯಾವುದೇ ಮೂಲೆಯಲ್ಲಿ ಯಾವ ಸಂಘಟನೆಯ ನೇತೃತ್ವದಲ್ಲಿ ನಡೆಯುವ ಎಲ್ಲಾ ರೈತ ಚಳುವಳಿಯ ಪ್ರಖ್ಯಾತಿಗೂ ತಾವೇ ಗುತ್ತೇದಾರರೆಂದು ಈ ಮೂಲಕ ತೋರಿಸಿಕೊಂಡಿದ್ದಾರೆ. ಇಷ್ಟು ಮಾತ್ರವಲ್ಲ, ತಮ್ಮ ನೇತೃತ್ವದ ರೈತ ಚಳುವಳಿ ಜಗತ್ತಿನ ಇತಿಹಾಸದಲ್ಲೇ ಹಿಂದೆಂದೂ ಕಂಡರಿಯದ ಬೃಹತ್ ಶಕ್ತಿಯೆಂದು ಸಮಾವೇಶದಲ್ಲಿ ಬಿಡುಗಡೆ ಮಾಡಲಾದ 'ನಮ್ಮ ನಾಡು 'ಪತ್ರಿಕೆಯಲ್ಲಿ ಬಡಾಯಿ ಕೊಚ್ಚಿಕೊಂಡಿದ್ದಾರೆ. ಜಗತ್ತಿನ ಇತಿಹಾಸ ವಿರಲಿ ಭಾರತದ ಚರಿತ್ರೆಯೇ ಕಂಡಿರುವ ತೆಲಂಗಾಣ ರೈತರ ಸಶಸ್ತ್ರ ಬಂಡಾಯ, ತೇಭಾಗ, ಕಯ್ಯೂರು ಇತ್ಯಾದಿ ರೈತ ಚಳುವಳಿಗಳು ಸಂಪಾದಕ ಪ್ರೊ|| ನಂಜುಂಡ ಸ್ವಾಮಿಯವರಿಗೆ ತಿಳಿದಿಲ್ಲವೇ ಇತ್ತೀಚಿಗಿನ ಕೆಲವು ವರ್ಷಗಳಲ್ಲಿ ದೇಶದಾದ್ಯಂತ ಬೆಳೆದು ಬರುತ್ತಿರುವ ರೈತ ಚಳುವಳಿಯ ಪ್ರತಿಬಿಂಬವಾಗಿ ನವದೆಹಲಿಯಲ್ಲಿ ಜರುಗಿದ ಬೃಹತ್ ರೈತ ರ್‍ಯಾಲಿಯಾಗಲೀ, ನರಗುಂದ ರೈತ ಬಂಡಾಯದ ಪ್ರತಿಧ್ವನಿಯಾಗಿ ಮೂಡಿ ಬಂದ ರಾಜ್ಯ ವ್ಯಾಪಿ ಹೋರಾಟ, ನೂರಾರು ಮೈಲಿಗಳ ಕಾಲ್ನಡಿಗೆ ಜಾಥಾ, ಬೃಹತ್ ಮತ ಪ್ರದರ್ಶನಗಳನ್ನು ಕಂಡಿಲ್ಲವೇ ? ಅಥವಾ ಈ ಎಲ್ಲಾ ಚಾರಿತ್ರಿಕ ಚಳುವಳಿಗಳಲ್ಲೂ ಸ್ವಾತಂತ್ರ್ಯ ಪೂರ್ವದಿಂದಲೂ ಹಳ್ಳಿಯ ಬಡವರ ದಿನ ನಿತ್ಯದ ಬೇಡಿಕೆಗಳಿಗಾಗಿ ದೇಶದ್ಯಾಂತದ ಹೋರಾಟಗಳನ್ನು ಸಂಘಟಿಸುವುದರೊಂದಿಗೇ ರೈತ ಚಳುವಳಿಗೆ ಕ್ರಾಂತಿ ಕಾರಿ ಆಯಾಮವನ್ನು ನೀಡಲೆತ್ನಿಸುತ್ತಿರುವ ಕಮ್ಯುನಿಸ್ ಪಕ್ಷಗಳ ಪ್ರಮುಖ ಪಾತ್ರವಿರುವುದರಿಂದ ಇತಿಹಾಸದ ಈ ಪುಟಗಳು ಪ್ರೊ|| ನಂಜುಂಡಸ್ವಾಮಿಯವರ ಕುರುಡು ಕಮ್ಯುನಿಸ್ಟ್ ವಿರೋಧಿ ಕಣ್ಣುಗಳಿಗೆ ಕಾಣುತ್ತಿಲ್ಲವೇ ? ತಮ್ಮ ಕೂಪ ಮಂಡೂಕತನದಿಂದ ಮುಗ್ಧ ರೈತರ ಅಜ್ಞಾನದ ಲಾಭ ಪಡೆಯಲೆತ್ನಿಸುತ್ತಿರುವ ಈ ಬುದ್ಧಿಜೀವಿ ಪ್ರೊಫೆಸರ್ ಚಾರಿತ್ರಿಕ ಸತ್ಯವನ್ನು ತನ್ನ ಕಪೋಲ ಕಲ್ಪಿತ ವಿಚಾರಗಳ ಪತ್ರಿಕೆಯಿಂದ ಹೂತು ಬಿಡಲು ಸಾಧ್ಯವೆ ?

ಸಮಾವೇಶದ ವೇದಿಕೆಯಲ್ಲಿ ಪ್ರಮುಖ ಭಾಷಣಕಾರರಾಗಿದ್ದ ಕರ್ನಾಟಕ ರಾಜ್ಯ ರೈತ ಸಂಘದ ಸೂತ್ರದಾರ ಸಿದ್ಧಾಂತಿ ಪ್ರೊ|| ಎಂ. ಡಿ. ನಂಜುಂಡ ಸ್ವಾಮಿಯವರು ರೈತ ಬಂಧುಗಳಿಗೆ 'ಹೊಸ ಕರ್ನಾಟಕ'ದ ಪ್ರಮಾಣವಚನ ಬೋಧಿಸಿದರು. ಅದರ ಸಾರಾಂಶವೆಂದರೆ 'ರೈತರ ಶತ್ರುಗಳಾದ ಕೈಗಾರಿಕೋದ್ಯಮಿಗಳೂ, ನೌಕರರೂ, ಪೋಲಿಸರು ಮತ್ತು ಈ ರೈತ ಶತ್ರುಗಳ ಗುಲಾಮರಾಗಿರುವ ಎಲ್ಲಾ ರಾಜಕೀಯ ಪಕ್ಷಗಳನ್ನು ಕರ್ನಾಟಕ ರಾಜ್ಯದ ರೈತರಾದ ನಾವು ತಿರಸ್ಕರಿಸಿ ಈ ಎಲ್ಲಾ ರೈತ ಶತ್ರುಗಳನ್ನು ನಾಶಮಾಡಿ ಹೊಸ ಕರ್ನಾಟಕ ಕಟ್ಟುತ್ತೇವೆ' ಎಂಬ ಪ್ರತಿಜ್ಞೆ. ಈ ಮೊದಲೇ ತಮ್ಮ ಭಾಷಣದಲ್ಲಿ ಪ್ರೊ|| ನಂಜುಂಡಸ್ವಾಮಿಯವರು ಈ ದೇಶದಲ್ಲಿರುವ ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳೂ ಚುನಾವಣೆ ಪಕ್ಷಗಳಾಗಿದ್ದು ಜನತೆಯ ಸಮಸ್ಯೆಗಳಿಗೆ ಕಾರಣ, ಪರಿಹಾರ ಸೂಚಿಸುವ ಯಾವುದೇ ರೀತಿಯ ಸಿದ್ಧಾಂತ, ಕಾರ್ಯಕ್ರಮ, ಕಾರ್ಯಕರ್ತರು ಮತ್ತು ಜನ ಬೆಂಬಲವನ್ನು ಹೊಂದಿಲ್ಲವೆಂದು ಸ್ವಯಂ ಘೋಷಿಸಿದರು. ಆದ್ದರಿಂದ ರೈತರು ಈ ಎಲ್ಲಾ ರಾಜಕೀಯ ಪಕ್ಷಗಳನ್ನು ತಿರಸ್ಕರಿಸಿ ತಮ್ಮದೇ ಆದ "ಪಕ್ಷಾತೀತ ರಾಜಕೀಯ ಪರ್ಯಾಯ" ಕಂಡುಕೊಳ್ಳಬೇಕೆಂದು ಕರೆ ನೀಡಿದರು. ಕರ್ನಾಟಕ ರಾಜ್ಯ ರೈತ ಸಂಘವು ಮದ್ದೂರು ವಿಧಾನಸಭಾ ಕ್ಷೇತ್ರದ ಮರುಚುನಾವಣೆಯಲ್ಲಿ "ಜನತಾ ಪಕ್ಷಕ್ಕೆ ಓಟು ಕೊಡಬೇಡಿ" ಎಂದು ಪ್ರಚಾರ ಮಾಡಿತ್ತು. ಈಗ ಯಾರಿಗೆ ಓಟು ಕೊಡಬೇಕು ಎಂಬುದಕ್ಕೂ ರೈತ ಸಂಘವು ಉತ್ತರ ಕಂಡು ಹಿಡಿದಿರುವುದಾಗಿ ತಿಳಿಸಿದರು. ಈ ಕಾರ್ಯತಂತ್ರದ ಪ್ರಕಾರ ಕ್ಷೇತ್ರವಾರು ಮತದಾರರ ಮಂಡಳಿಗಳನ್ನು ರಚಿಸಿ ಯಾವುದೇ ರಾಜಕೀಯ ಪಕ್ಷಕ್ಕೂ ಸೇರಿರದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ರೈತ ಸಂಘವು ಈ ಪಕ್ಷಾತೀತ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಿ ವಿಜಯಗಳಿಸಿ ಹೊಸ ಸರ್ಕಾರ ರಚಿಸಲಾಗುವುದು. ರೈತ ಸಂಘದ ಯಾವುದೇ ಸದಸ್ಯನೂ ಸಹ ಚುನಾವಣೆಗಳಲ್ಲಿ

ಎಸ್. ಆರ್. ಆರಾಧ್ಯ

ಸ್ಪರ್ಧಿಸದೆ ಕರ್ನಾಟಕ ರಾಜ್ಯ ರೈತ ಸಂಘವು ಚುನಾವಣಾ ರಾಜಕೀಯದಿಂದ ದೂರವಿದ್ದು ಹೋರಾಟದ ವೇದಿಕೆಯಾಗಿಯೇ ಮುಂದುವರಿಯುವುದು. ಹೊಸ ಸರ್ಕಾರವೂ ರೈತ ವಿರೋಧಿ ನಿಲುವು ತಳೆದಾಗ ಟೀಕಿಸುವ ಹಕ್ಕನ್ನು ಹೊಂದಿರುವುದೆಂದು ಹೇಳಲಾಗಿದೆ.

ರೈತರು ಇದೀಗ ತಮ್ಮದೇ ಆದ ಹೊಸ ಪರ್ಯಾಯ ಕಂಡುಕೊಳ್ಳುವ ಹಂತ ತಲುಪಿದ್ದಾರೆಂಬ ಮಾತುಗಳ ಮೂಲಕ ಕರ್ನಾಟಕ ರಾಜ್ಯ ರೈತ ಸಂಘವು ಇದುವರೆಗೆ ಅನುಸರಿಸಿಕೊಂಡು ಬಂದ ಸಂದರ್ಭಸಾಧಕ ರಾಜಕೀಯ ನೀತಿಯನ್ನು ಮುಚ್ಚಿಡಲು ಪ್ರಯತ್ನಿಸಲಾಗಿದೆ. ಪ್ರಾರಂಭದಲ್ಲಿ ರೈತ ಸಂಘವು ರಾಜಕೀಯ ರಹಿತವಾದುದೆಂದೂ, ಚುನಾವಣೆಗಳಿಗೂ ನಮಗೂ ಸಂಬಂಧವಿಲ್ಲವೆಂದು ಸಾರಿ ರೈತ ಸಂಘದ ಪದಾಧಿಕಾರಿಗಳು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನಾಗಲೀ, ಯಾವುದೇ ಪಕ್ಷದ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡುವುದನ್ನಾಗಲೀ ನಿರ್ಬಂಧಿಸಲಾಗಿತ್ತು. ರಾಜಕೀಯವು ಸಮಾಜದ ಪ್ರತಿಯೊಬ್ಬನ ಬದುಕನ್ನು ನಿಯಂತ್ರಿಸುತ್ತಿರುವಾಗ ರೈತರಾದರೂ ರಾಜಕೀಯದಿಂದ ದೂರ ಉಳಿಯಲು ಸಾಧ್ಯವೇ ? ಈ ವೈರುಧ್ಯದಿಂದಲೇ ಕರ್ನಾಟಕ ರಾಜ್ಯ ರೈತ ಸಂಘವು ಹೋಳಾಗಿ ಶ್ರೀಮಾನ್ ರೇವಣಸಿದ್ದಪ್ಪನವರ ಗುಂಪು ಹೊರಬಂದು ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಜನತಾ ಪಕ್ಷಕ್ಕೆ ಬೆಂಬಲ ನೀಡಿತು. ರೈತ ಸಂಘದ ರಾಜಕೀಯ ನೀತಿಯ ಎರಡನೆಯ ಮಜಲು ಮದ್ದೂರು ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆ. ಜನತಾ ಪಕ್ಷದ ಅಭ್ಯರ್ಥಿಯ ವಿರುದ್ಧವಾಗಿ ಪ್ರಚಾರ ಮಾಡುವ ಮೂಲಕ ರೈತ ಸಂಘವು ಕಾಂಗ್ರೆಸ್ [ಐ] ಪಕ್ಷದ ಗೆಲುವಿಗೆ ಪರೋಕ್ಷ ಬೆಂಬಲ ನೀಡಿತು. ಹೀಗೆ ಚುನಾವಣಾ ರಾಜಕೀಯದ ಕಡೆ ರೈತ ಸಂಘವು ಕ್ರಮೇಣವಾಗಿ ಆಕರ್ಷಿತವಾಗುತ್ತಿದ್ದು ಇದೀಗ "ಪಕ್ಷಾತೀತ ಚುನಾವಣಾ ರಾಜಕೀಯ" ದಲ್ಲಿ ಧುಮುಕುತ್ತಿದೆ. ಚುನಾವಣೆಗಳು ಸಮೀಪಿಸಿದಂತೆ ಸಂಘದ ನಿರ್ಬಂಧದಿಂದ ಹೊರಬರಲು ರೈತ ಸಂಘದ ಸದಸ್ಯತ್ವಕ್ಕೇ ರಾಜೀನಾಮೆ ನೀಡಿ ಈ ಹೊಸ "ಪಕ್ಷಾತೀತ ಪಕ್ಷ ?" ದ ಟಿಕೆಟುಗಳಿಗಾಗಿ ನೂಕು ನುಗ್ಗಲು ಪ್ರಾರಂಭವಾದಲ್ಲಿ ಆಶ್ಚರ್ಯವೇನಿಲ್ಲ. ಸಾವಿಲ್ಲದ ಮನೆಯ ಸಾಸುವೆ ಹುಡುಕಿದ ಹಾಗೆ ರಾಜಕೀಯ ಪಕ್ಷಗಳಿಗೆ ಎಂದೂ ಸಂಬಂಧವಿರದ ಅಭ್ಯರ್ಥಿಗಳನ್ನು ಅವೇಗೆ ಸೃಷ್ಟಿಸುವರೋ ಕಾದು ನೋಡಬೇಕಾಗಿದೆ.

ಈ ಹಿಂದೆ ಪ್ರಜಾಪ್ರಭುತ್ವ ರೀತಿಯಲ್ಲಿ ಜನತೆಯ ಪ್ರತಿನಿಧಿಗಳಾಗಿ ಚುನಾಯಿತರಾದ ಶಾಸಕರಿಂದ ಬಲಾತ್ಕಾರವಾಗಿ ಜನತಾ ಸರ್ಕಾರಕ್ಕೆ ನೀಡಿದ ಬೆಂಬಲ ಹಿಂತೆಗೆಯಲು ಒತ್ತಾಯಿಸಿ ಸರ್ಕಾರವನ್ನು ಉರುಳಿಸುವ ತಂತ್ರದಲ್ಲಿ ವಿಫಲರಾದ ಪ್ರೊ|| ನಂಜುಂಡಸ್ವಾಮಿಯವರು ತಮ್ಮ ಭಾಷಣದಲ್ಲಿ ಜನತಾ ಸರ್ಕಾರದ ವಿರುದ್ಧ ಕಿಡಿಕಾರಿದರು. ರೈತರ ಹೆಸರೇಳಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ರೈತರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆಯೆಂದು ಟೀಕಿಸಿದರು. ಮೂರುವರೆ ದಶಕಗಳಿಗೆ ಮೀರಿದ ಕಾಂಗ್ರೆಸ್ ಆಡಳಿತೆಯೊಂದಿಗೆ ಜನತಾ ಸರ್ಕಾರದ ಸಾಧನೆಯನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗಿದರು. ಇನ್ನೂ ಮುಂದುವರಿದು ಕಾಂಗ್ರೆಸ್ (ಐ) ಸರ್ಕಾರವು ರೈತ ಸಂಘದೊಂದಿಗೆ ಗೌರವಯುತ ಸಂಧಾನಕ್ಕಾದರೂ ಸಿದ್ಧವಿತ್ತು. ಜನತಾ ಸರ್ಕಾರವು ಮಾತುಕತೆಗೂ ಸಿದ್ಧವಿಲ್ಲವೆಂದು ಮಿಥ್ಯಾರೋಪ ಮಾಡಲಾಗಿದೆ. ಎಲ್ಲ ರೈತ ಸಂಘಟನೆಗಳಿಗೂ ಮಾನ್ಯತೆ ನೀಡಿ ಮಾತುಕತೆ ನಡೆಸುವ ಜನತಾ ಸರ್ಕಾರದ ಪ್ರಜಾಪ್ರಭುತ್ವ ನಿಲುವು ಒಪ್ಪದ ನಂಜುಂಡಸ್ವಾಮಿಯವರ ನೇತೃತ್ವದ ರೈತ ಸಂಘದ ಪ್ರತಿಷ್ಟೆ, ಅಹಂಭಾವವೇ ಈ ಆರೋಪದ ಹಿಂದಿರುವ ಸತ್ಯಾಂಶವಾಗಿದೆ.

ಯಾವುದೇ ಒಂದು ಪಕ್ಷದ ನಿರ್ಧಿಷ್ಟ ಸಿದ್ಧಾಂತ ಧೋರಣೆಗಳಿಗೆ ಬದ್ಧರಾಗದೇ ಭಾರತದ ರಾಜಕಾರಣದಲ್ಲಿ ವ್ಯಕ್ತಿನಿಷ್ಟ ರಾಜಕಾರಣಿಗಳಾಗಿಯೇ ಕ್ಷೀಣವಾದ ಮಾಜಿ ಸಮಾಜವಾದಿಗಳಗುಂಪಿಗೆ ಸೇರಿದ ಪ್ರೊ. ನಂಜುಂಡ ಸ್ವಾಮಿಯವರು ಇದೀಗ ಗಾಂಧೀಜಿಯವರ ಗ್ರಾಮ ರಾಜ್ಯ, ಜಯಪ್ರಕಾಶ ನಾರಾಯಣರ ಅಪೂರ್ಣವಾದ "ಸಂಪೂರ್ಣ ಕ್ರಾಂತಿ" ಯನ್ನು ಪೂರ್ಣಗೊಳಿಸಲು ಹಂಬಲಿಸುತ್ತಿದ್ದಾರೆ. ಯಾವುದೇ ಪಕ್ಷದ ಶಿಸ್ತು, ನಿಷ್ಟೆಗೂ ಬದ್ಧರಾಗಿರದ ಸಮಾಜವಾದಿಗಳ ಗುಂಪು ಸಂದರ್ಭಕ್ಕೆ ತಕ್ಕ ಹಾಗೆ ಹಲವಾರು ಪಕ್ಷಗಳಿಗೆ ಸೇರಿ ಅದೃಶ್ಯವಾದರು. ಈ ಸಂಪ್ರದಾಯದ ಪ್ರತಿಬಿಂಬವೇ ಪ್ರೊ. ನಂಜುಂಡಸ್ವಾಮಿಯವರ "ಪಕ್ಷಾತೀತ ರಾಜಕೀಯ" ತಂತ್ರವೆಂಬುದನ್ನು ಗಮನಿಸಬೇಕಾಗಿದೆ.

ಶತಮಾನಗಳಿಂದ ಭಾರತೀಯ ಸಮಾಜದಲ್ಲಿ ಬೇರು ಬಿಟ್ಟು ಬೆಳೆದು ನಿಂತಿರುವ ಊಳಿಗಮಾನ್ಯ ಆರ್ಥಿಕ ಪದ್ಧತಿಯ ಮೇಲೆ ಬ್ರಿಟೀಶ್ ಸಾಮ್ರಾಜ್ಯ ಶಾಹಿಗಳ ಮೂಲಕ ಹೇರಲ್ಪಟ್ಟ ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯೇ ಇಂದಿನ ಭಾರತದ ಸಂಕೀರ್ಣತೆಯಾಗಿದೆ. ಭಾರತ ಸರ್ಕಾರವು ಪ್ರತಿನಿಧಿಸುತ್ತಿರುವ ಹಿರಿಯ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ—ಭೂಮಾಲಕ ವರ್ಗದ ಪ್ರಭುತ್ವವನ್ನು ಕೊನೆಗಾಣಿಸಿ ಜನತಾ ಪ್ರಜಾ ಪ್ರಭುತ್ವ ಕ್ರಾಂತಿಯ ಮೂಲಕ ಸಮಾಜವಾದಿ ಪರಿವರ್ತನೆಯಾದಲ್ಲಿ ಮಾತ್ರ ರೈತ ಸಮುದಾಯವೂ ಸೇರಿದಂತೆ ಎಲ್ಲಾ ದುಡಿಯುವ ಜನತೆಯ ವಿಮೋಚನೆ ಸಾಧ್ಯ. ಈ ಗುರಿಸಾಧನೆಗಾಗಿ ಆಧುನಿಕ ಸಮಾಜದ ಉತ್ಪಾದನಾ ಚಕ್ರದ ಸಂಚಾಲಿತ ಶಕ್ತಿಯಾಗಿರುವ ಕಾರ್ಮಿಕ ವರ್ಗದ ಮುಂಚೂಣಿಯಲ್ಲಿ ಕೃಷಿಕೂಲಿಗಾರ—ಬಡರೈತ ಆಧಾರಿತ ರೈತ ಸಂಘಟನೆಯ ಮೂಲಕ ಹಳ್ಳಿಯ ಬಡವರನ್ನು ಒಂದುಗೂಡಿಸಿ, ಎಲ್ಲಾ ದುಡಿಯುವ ಜನತೆಯನ್ನು ಸಂಘಟಿಸಿ, ವಿದ್ಯಾರ್ಥಿ—ಯುವಜನ—ಮಹಿಳೆಯರು—ಮಧ್ಯಮವರ್ಗ, ಇತ್ಯಾದಿ ಎಲ್ಲಾ ಪ್ರಗತಿಪರ ಶಕ್ತಿಗಳ ಸಹಕಾರದೊಂದಿಗೆ ವರ್ಗ ಹೋರಾಟವೊಂದೇ ದಾರಿ. ಈ ವಿಶಾಲ ಐಕ್ಯರಂಗದ ಹೋರಾಟದೊಂದಿಗೇ ಭಾರತಿಯ ಸಮಾಜದಲ್ಲಿನ ಜಾತಿಪದ್ಧತಿ—ಸಾಮಾಜಿಕ ಅಸಮಾನತೆಯನ್ನು ಕೊನೆಗಾಣಿಸಬೇಕು. ಈ ಸ್ಪಷ್ಟ ನಿಲುವಿನ ಕಾರ್ಯಕ್ರಮದೊಂದಿಗೆ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಜನತೆಯ ಸಂಘಟನೆಯಲ್ಲಿ ತೊಡಗಿದೆ.


ಜನತೆಯ ಪ್ರಜ್ಞೆಯ ಮಟ್ಟವನ್ನು ಹೆಚ್ಚಿಸಲು ಸಂಸದೀಯ ರಾಜಕೀಯವನ್ನು ಉಪಯೋಗಿಸಿಕೊಂಡು ಜನತಾ ಆಂದೋಲನವನ್ನು ಮುಂದೆ ಕೊಂಡೊಯ್ಯಲು ಇತರೆ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಿ ಸರ್ವಾಧಿಕಾರಿ—ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಡಬೇಕಾ

(6ನೇ ಪುಟ ನೋಡಿ)

ದುಡಿಯುವ ಜನತೆಯ ಐಕ್ಯತೆ ಬಲಿಷ್ಠವಾಗಲಿ

ಸರ್ವಾಧಿಕಾರಿ - ವಿಚ್ಛಿದ್ರಕಾರಿ ಶಕ್ತಿಗಳನ್ನು ಸೋಲಿಸೋಣ

ಜೈಪುರದಲ್ಲಿ ಸೇರಿದ್ದ ಸಿ. ಐ. ಟಿ. ಯು. ಜನರಲ್ ಕೌನ್ಸಿಲ್ ಸಭೆಯ ಕರೆ



"ಹಿಂದೆಂದೂ ಕಾಣದಂತ ಬೆಳವಣಿಗೆಗಳನ್ನು ಕಳೆದೆರಡು ವರ್ಷಗಳಲ್ಲಿ ನಮ್ಮ ದೇಶ ಎದುರಿಸುತ್ತಿದೆ. ಅವುಗಳನ್ನು ಗುರುತಿಸಲು ಅಷ್ಟೇ ಅಲ್ಲ ಅವುಗಳನ್ನೆದುರಿಸಲು ಕಾರ್ಮಿಕ ಸಂಘಟನೆ ಸಾಕಷ್ಟು ಪ್ರಯತ್ನ ಮಾಡಿರುವುದಿಲ್ಲ.

ಸರ್ವಾಧಿಕಾರಿ ಮತ್ತು ಛಿದ್ರಕಾರಿ ಶಕ್ತಿಗಳು ಅಪಾಯಕಾರಿ ಹಂತ ತಲ್ಪುತ್ತಿವೆ. ವಿದೇಶಿ ಸಾಮ್ರಾಜ್ಯಶಾಹಿಗಳು ಇವುಗಳಿಗೆ ಸಂಪೂರ್ಣ ಬೆಂಬಲ ನೀಡುತ್ತಿವೆ. ದೇಶದ ಐಕ್ಯತೆಯನ್ನು ಮುರಿದು ಸಾರ್ವಭೌಮತ್ವವನ್ನು ನಾಶ ಮಾಡುವುದೇ ಅವರ ಗುರಿಯಾಗಿದೆ. ಅವುಗಳನ್ನು ಕಾರ್ಮಿಕ ವರ್ಗ ಗುರುತಿಸಬೇಕು. ಅವುಗಳ ವಿರುದ್ಧ ಐಕ್ಯ ಹೋರಾಟ ಮುಂದುವರಿಸಬೇಕು."

"ಒಬ್ಬ ಮಾಲಿಕ ಅಥವಾ ಇಂದಿರಾ ಕಾಂಗ್ರೆಸ್ಸಿನ ವಿರುದ್ಧವಷ್ಟೇ ನಮ್ಮ ಹೋರಾಟ ಸೀಮಿತವಾಗಿಲ್ಲ. ನಾವು ಮತ್ತು ಭಾರತ ದೇಶದ ಜನತೆ ಅಂತರಾಷ್ಟ್ರೀಯ ಸಾಮ್ರಾಜ್ಯಶಾಹಿಗಳ ಮುಖಾಮುಖಿಯಾಗಿದ್ದೇವೆ. ಇತರ ದೇಶಗಳನ್ನು ಗುಲಾಮ ಗಿರಿಯಲ್ಲಿಡುವ ತನ್ನ ಹಳೇ ನಿಲುವೆಯನ್ನೇ ಸಾಮ್ರಾಜ್ಯಶಾಹಿಗಳು ಮುಂದುವರಿಸಿದ್ದಾರೆ. ಆ ಕಾರಣಕ್ಕಾಗಿಯೇ, ಇತ್ತೀಚೆಗೆ ಸ್ವಾತಂತ್ರ್ಯ ಪಡೆದ ದೇಶಗಳಲ್ಲಿ ಅನೈಕ್ಯತೆ, ಭಿನ್ನಾಭಿಪ್ರಾಯಗಳು ಬೆಳೆದು ಬರಬೇಕೆಂದೂ, ಭಾರತದಂತ ದೇಶವನ್ನು ನಿಶ್ಶಕ್ತಗೊಳಿಸಿ, ವಿಭಜಿಸಿ, ಚೂರು ಚೂರು ಮಾಡಿ ಕೊನೆಗೆ ಅದನ್ನು ನುಂಗಬೇಕೆಂಬ ದುರುದ್ದೇಶ ಹೊಂದಿದವರಾಗಿದ್ದಾರೆ ಸಾಮ್ರಾಜ್ಯಶಾಹಿಗಳು.

ಆದ್ದರಿಂದ ಕಾರ್ಮಿಕ ವರ್ಗ ಸಾಮ್ರಾಜ್ಯಶಾಹಿಗಳ ಕುತಂತ್ರವನ್ನು ಸಂಪೂರ್ಣ ಅರಿತುಕೊಂಡು ಐಕ್ಯ ಹೋರಾಟ ಮುಂದುವರಿಸಬೇಕು" ಎಂದು ಸಿ.ಐ.ಟಿ.ಯು. ಅಧ್ಯಕ್ಷರಾದ ಕಾ|| ಬಿ. ಟಿ. ರಣದಿವೆಯವರು ಸೆಪ್ಟೆಂಬರ್ 28 ರಿಂದ 30 ರ ವರೆಗೆ ಜೈಪುರದಲ್ಲಿ ಸೇರಿದ್ದ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆಯಲ್ಲಿಅಧ್ಯಕ್ಷಸ್ಥಾನದಿಂದ ಕರೆ ನೀಡಿದರು.

ಆಗಸ್ಟ್ 26 ರಿಂದ 28 ರ ವರೆಗೆ ಈ ಕೌನ್ಸಿಲ್ ಸಭೆ ನಡೆಯಬೇಕಾಗಿತ್ತು. ಆದರೆ ಇಂದಿರಾ ಗಾಂಧಿಯ ಕೇಂದ್ರ ಸರಕಾರ ಬಹುಮತವಿದ್ದ ಆಂಧ್ರದ ಎನ್.ಟಿ.ಆರ್. ಸರಕಾರವನ್ನು ಉರುಳಿಸಿ ಪ್ರಜಾಪ್ರಭುತ್ವದ ಕೊಲೆಗೈದಿರುವುದನ್ನು ಪ್ರತಿಭಟಿಸಲು ಆಂಧ್ರದ ಜನತೆ ಹೋರಾಟ ನಡೆಸಿದ ಕಾರಣ ರೇಲ್ವೆಗಳ ಸಂಚಾರ ನಿಲ್ಲಿಸಲ್ಪಟ್ಟದ್ದಷ್ಟೇ ಅಲ್ಲ ಸೆಪ್ಟೆಂಬರ್ 25 ರಂದು ದೇಶಾದ್ಯಂತ ಪ್ರಜಾಪ್ರಭುತ್ವ ರಕ್ಷಣೆ ದಿನ ಆಚರಿಸಬೇಕೆಂದು ವಿರೋಧ ಪಕ್ಷಗಳೆಲ್ಲ ಕರೆಕೊಟ್ಟದ್ದರಿಂದಾಗಿ ಕೌನ್ಸಿಲ್ ಸಭೆಯನ್ನು ಮುಂದೂಡಲಾಗಿತ್ತು.

ಕಾ|| ರಣದಿವೆಯವರು ತಮ್ಮ ಭಾಷಣದಲ್ಲಿ ಅಂತರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ಕುರಿತು ವಿವರ ನೀಡುತ್ತ ಅಮೇರಿಕದ ಸಾಮ್ರಾಜ್ಯಶಾಹಿಗಳು ಯುರೋಪಿನಲ್ಲಿ ಕ್ರೂಯಿಸ್ ಅಣ್ವಸ್ತ್ರಗಳನ್ನು ನೂರಾರು ಸಂಖ್ಯೆಯಲ್ಲಿ ಸ್ಥಾಪಿಸುವುದರ ಮೂಲಕ ಜಗತ್ತನ್ನು ಯುದ್ಧದ ಗಂಡಾಂತರಕ್ಕೆ ದೂಡುತ್ತಿರುವುದರ ಕಡೆ ಗಮನ ಸೆಳೆದು ಆ ದೇಶಗಳಲ್ಲಿಯ ಜನತೆ ಯುದ್ಧ ನಿಶೇಧಿಸಿ ಶಾಂತಿ ಚಳುವಳಿ ನಡೆಸುತ್ತಿರುವುದು ಮಹತ್ವ ಪೂರ್ಣವೆಂದರು. ಇದರ ಜೊತೆಯಲ್ಲಿಯೇ ಸೋವಿಯತ್ ರಶ್ಯಾ ಮತ್ತು ಸಮತಾವಾದಿ ದೇಶ ಅಣ್ಣುಯುದ್ಧದ ಗಂಡಾಂತರದಿಂದ ಜಗತ್ತನ್ನುಳಿಸಲು ಮಾಡುತ್ತಿರುವ ಪ್ರಯತ್ನಗಳನ್ನು ವಿವರಿಸಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳು ಯುದ್ಧ ಹೂಡಿದ್ದೇ ಆದರೆ ಅದನ್ನೆದುರಿಸಲು ಸಿದ್ಧವೆಂದು ಸಮತಾವಾದಿ ದೇಶಗಳು ಸಾರಿರುವುದು ಆಕ್ರಮಣಕಾರರ ಎದೆಗುಂಡಿಗೆಯನ್ನ ತಣಿಸುವಂತಾಗಿದೆಂದು ಹೇಳಿದರು.

ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರಿ ಸರಕಾರಕ್ಕೂ, ಶ್ರೀಲಂಕಾದ ಜಯವರ್ಧನೆಯವರ ಪ್ರತಿಗಾಮಿ ಸರಕಾರಕ್ಕೂ ಆಧುನಿಕ ಶಸ್ತ್ರಾಸ್ತ್ರಗಳನ್ನು ಪೂರೈಸಿ ಅಮೇರಿಕದ ಸಾಮ್ರಾಜ್ಯಶಾಹಿಗಳು ಭಾರತ ದೇಶವನ್ನು ಸುತ್ತುವರಿಯುತ್ತಿರುವುದನ್ನು ಎತ್ತಿ ತೋರಿಸಿದರು.

ಕೇಂದ್ರ ಸರಕಾರ ಅನುಸರಿಸುತ್ತಿರುವ ಮೂಲ ಆರ್ಥಿಕ ನೀತಿಯಿಂದಾಗಿ ದೇಶದಲ್ಲಿ ನೂಲು-ಬಟ್ಟೆ ಗಿರಣಿಗಳು ಭೀಕರ ಗಂಡಾಂತರ ಪರಿಸ್ಥಿತಿಯಲ್ಲಿವೆ ಎಂದೂ, ಗ್ರಾಮಾಂತರ ಪ್ರದೇಶದ ಕೋಟಿಗಟ್ಲೆ ಜನ ಬಟ್ಟೆ ಇಲ್ಲದೆ ಬೆತ್ತಲೆ ಜೀವಿಸುತ್ತಿರುವಾಗ, ನಮ್ಮ ದೇಶದಲ್ಲಿ 100 ಕ್ಕಿಂತಲೂ ಹೆಚ್ಚು ಬಟ್ಟೆ ಗಿರಣಿಗಳು ಮುಚ್ಚಲ್ಪಟ್ಟು, ಹಾನಿಗೊಂಡಿವೆಯೆಂದು ಸಾರಿ ಲಕ್ಷಾವಧಿ ಕಾರ್ಮಿಕರು ಬೀದಿಪಾಲಾಗಿರುವುದನ್ನು ವಿವರಿಸಿ, ಇದಕ್ಕೆ ಪರಿಹಾರವಾಗಿ ಎಲ್ಲ ಬಟ್ಟೆ ಗಿರಣಿಗಳನ್ನೂ ರಾಷ್ಟ್ರೀಕರಿಸಿ ಗಿರಣಿಗಳ ಆಡಳಿತೆಯಲ್ಲೂ ಉತ್ಪಾದನೆಯಲ್ಲೂ ಕಾರ್ಮಿಕರು ಭಾಗಿದಾರರಾಗುವಂತೆ ಮಾಡುವ ಅವಶ್ಯಕತೆ ಇದೆಎಂದು ಹೇಳಿದರು.

ಕಾನ್‌ಪುರ ಸಮ್ಮೇಳನದ ನಂತರ ಕಾರ್ಮಿಕರ ಐಕ್ಯತೆ ಸಾಧಿಸುವ ದಿಸೆಯಲ್ಲಿ ನಾವು ಮುಂದುವರಿದಿದ್ದರೂ ಅಷ್ಟರಿಂದಲೇ ಸಂತೃಪ್ತರಾಗುವಂತಿಲ್ಲೆಂದೂ ಎಚ್ಚರಿಸಿದರು. ಈಗಿನ ಪರಿಸ್ಥಿತಿಯಲ್ಲಿ ಎಷ್ಟು ಬಲಿಷ್ಟವಾದ ಐಕ್ಯತೆ ಮತ್ತು ಹೋರಾಟದಲ್ಲಿ ಮುಂದುವರಿಕೆ ಸಾಧ್ಯತೆಯಿತ್ತೊ ಅದನ್ನು ತಲುಪಲು ಸಾಧ್ಯವಾಗಿಲ್ಲೆಂದೂ, ಲಾ ಕೌಟ್ ಮುಚ್ಚುವಿಕೆಗಳಂಥ ಕಾರ್ಮಿಕ ವಿರೊಧಿ ಕ್ರಮಗಳೆಲ್ಲ ಎಷ್ಟುಗಂಭೀರವಾಗಿದ್ದರೂ ಅವುಗಳ ವಿರುದ್ಧ ಹೋರಾಟದಲ್ಲಿ ಜಯಗಳಿಸಿದ್ದೇವೆಂದುಹೆಮ್ಮೆಯಿಂದ ಹೇಳಲು, ಸಾಧ್ಯವಿಲ್ಲ ; ಅಷ್ಟೇ ಅಲ್ಲ ಅದರ ತೀವ್ರತೆಯನ್ನು ತಡೆ ಹಿಡಿಯುವುದರಲ್ಲಿಯೂ ನಾವು ಸಫಲರಾಗಿಲ್ಲ. ನಮ್ಮ ದೇಶದ ಅತಿ ದೊಡ್ಡ ಕೈಗಾರಿಕೆಯಾದ ಬಟ್ಟೆ ಗಿರಣಿ ನಮ್ಮ ಕಾರ್ಮಿಕ ಐಕ್ಯತೆಯಲ್ಲಿಯ ನಿಶ್ಶಕ್ತತೆಯಪ್ರತೀಕವಾಗಿನೆಂದೂ ಅದು ಅಸಂಘಟಿತ ಮತ್ತು ಹರಿದು ಹಂಚಿ ಹೋದ ಕೈಗಾರಿಕೆಗಳಲ್ಲಿಯ ದಬ್ಬಾಳಿಕೆ ತಡೆಯುವಲ್ಲಿಯೂ ಸಫಲವಾಗಿಲ್ಲೆಂದೂ ಹೇಳಿದರು.

ಏಳನೆಯ ಪಂಚ ವಾರ್ಷಿಕ ಯೋಜನೆಯ ಧ್ಯೇಯೋದ್ದೇಶದ ಕುರಿತು ವಿವರಿಸುತ್ತಾ ಈ ಯೋಜನೆಗಾಗಿ ರೂ. 3,20,000 ಕೋಟಿ ಅಂದಾಜು ಮಾಡಿದ್ದರೂ ಇದರ ಪೈಕಿ ರೂ. 1,80,000 ಕೋಟಿ ಸಾರ್ವಜನಿಕ ಕ್ಷೇತ್ರಕ್ಕೆ ಮೀಸಲಾಗಿಟ್ಟದ್ದರೂ ಕೂಡ, ಹಿಂದಿನ ಆರು ಯೋಜನೆಗಳ ಕಾಲಾವಧಿಯಲ್ಲಿ ನಮ್ಮ ದೇಶದ ಜನತೆ, ಕಾರ್ಮಿಕವರ್ಗ ಎದುರಿಸುತ್ತಾ ಬಂದಂಥಾ ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆ, ಕೊಳಚೆ ಪ್ರದೇಶಗಳಲ್ಲಿಯವಾಸ ಮತ್ತು ಬೆವರು ಸುರಿಸುವ ದುಡಿತಗಳಿಗೆ ಪರಿಹಾರ ತೋರಿಸಿಲ್ಲೆಂಬುದನ್ನು ತಿಳಿಸಿ ಹೇಳಿದರು. ಏಳನೆಯ ಪಂಚವಾರ್ಷಿಕ ಯೋಜನೆ ದೇಶದ ಜನರಿಗೆ ದುಡಿಯುವ ವರ್ಗಕ್ಕೆ ಯಾವುದೇ ಪರಿಹಾರ ಒದಗಿಸಲಾರನೆಂದೂ, ಅದರ ಬದಲಾಗಿ ಜನರ ಮತ್ತು ಕಾರ್ಮಿಕ ವರ್ಗದ ಪರಿಸ್ಥಿತಿ ಮತ್ತಷ್ಟು ಕೆಡಿಸುವಂಥ ಭವಿಷ್ಯತ್ತನ್ನು ತೋರಿಸುತ್ತಿದೆಂದೂ ಎಚ್ಚರಿಸಿದರು.

ಪಶ್ಚಿಮ ಬಂಗಾಲ ಮತ್ತು ತ್ರಿಪುರಾದ ಎಡರಂಗ ಸರಕಾರಗಳಿಗೆ ಹಣ ಪರಿಹಾರ ಧನ ಔದ್ಯೋಗಿಕ ಬೆಳವಣಿಗೆಗಳ ವಿಷಯಗಳಲ್ಲಿ ಅನ್ಯಾಯ ವೆಸಗುತ್ತಿದೆಂದೂ, ಅದೇ ಸಮಯದಲ್ಲಿ ಇತರ ಪ್ರತಿಗಾಮಿ ಶಕ್ತಿಗಳ ಜೊತೆ ಸೇರಿ ಈ ರಾಜ್ಯಗಳಲ್ಲಿ ಹಿಂಸಾಚಾರಗೊಂದಲಗಳನ್ನುಂಟು ಮಾಡಲು ತಮ್ಮ ಬೆಂಬಲಿಗರಿಗೆ ಸಂಪೂರ್ಣ ಅಪ್ಪಣೆ ಕೊಟ್ಟದೆಂದೂ ಆರೋಪಿಸಿದರು.

ಸಾಮ್ರಾಜ್ಯ ಶಾಹಿಗಳೂ, ಸರ್ವಾಧಿಕಾರಿ ಶಕ್ತಿಯೂ, ಛಿದ್ರಕಾರಿಗಳೆಲ್ಲ ಸೇರಿ ಅತ್ಯಂತ ಗಂಡಾಂತರ ಕಾರಿಯಾದ ಒಳಸಂಚನ್ನು ಹೂಡಿದ್ದಾರೆ. ಅಸ್ಸಾಂ, ಪಂಜಾಬ್ ಸಮಸ್ಯೆಗಳಲ್ಲಿ ಅಮೇರಿಕ, ಪಾಕಿಸ್ತಾನಗಳ ಆಳವಾದ ಕೈವಾಡವಿದೆ.

ಆರ್ಥಿಕ ಬಿಕ್ಕಟ್ಟಿನಿಂದಾಗಿ ಉಂಟಾಗಿರುವ ವಿಕೃತ ರೂಪಗಳು. ಈ ರಾಜ್ಯಗಳಲ್ಲಿ ಎದ್ದು ಕಾಣಿಸುತ್ತಿವೆಂದು ತಿಳಿಯುವುದು ತಪ್ಪೆಂದೂ ಇವೆಲ್ಲ ಒಳಸಂಚಿನ ಕೃತಿಗಳೆಂಬುದನ್ನು ಮರೆಯಬಾರನೆಂದೂ ಎಚ್ಚರಿಸಿದರು.

ಆದ್ದರಿಂದ ನಮ್ಮ ದೇಶದ ಕಾರ್ಮಿಕ ವರ್ಗ ಜಾಗೃತಿಗೊಳ್ಳಬೇಕೆಂದೂ, ಸಾಮ್ರಾಜ್ಯಶಾಹಿ, ಛಿದ್ರಕಾರಿ, ಪ್ರತ್ಯೇಕವಾದಿ ಶಕ್ತಿಗಳ ವಿರುದ್ಧ ಹೋರಾಡಲು ಎದ್ದೇಳಬೇಕೆಂದೂ ಕರೆ ನೀಡಿದರು. ತನ್ನ ಸಂಘಟಿತ ಶಕ್ತಿಯಿಂದ ಕಾರ್ಮಿಕ ಸಂಘಗಳ ಚಳುವಳಿ, ರಾಷ್ಟ್ರ ವಿರೋಧಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಮುಖಂಡತ್ವ ನೀಡಬೇಕೆಂದೂ, ತನ್ನ ಸಂಘಟಿತ ಮಧ್ಯ ಪ್ರವೇಶದಿಂದ ಈ ಆಹ್ವಾನವನ್ನು ಸ್ವೀಕರಿಸಲು ಇತರ ಜನ ವಿಭಾಗಗಳನ್ನು ಹುರಿದುಂಬಿಸಬೇಕೆಂದೂ ಹೇಳಿದರು. ಇಂದಿನ ಹೊಸ ಪರಿಸ್ಥಿತಿಯಲ್ಲಿ ಕಾರ್ಮಿಕ ಸಂಘಟನೆಗಳ ಅತಿತುರ್ತಿನ ಕರ್ತವ್ಯ ಇದಾಗಿದೆಂದೂ ಒತ್ತಿ ಹೇಳಿದರು.

ಪ್ರಧಾನ ಕಾರ್ಯದರ್ಶಿ ಸಮರ ಮುಖರ್ಜಿಯವರು ತಮ್ಮ ಸುದೀರ್ಘ ವರದಿಯಲ್ಲಿ ಕಳೆದ ಒಂದೂವರೆ ವರ್ಷದಲ್ಲಿ ಕಾರ್ಮಿಕ ವರ್ಗ ಯಾವ ರೀತಿ ದೃಢವಾದ, ನಿರ್ಧರಿತ, ಐಕ್ಯ ಹೋರಾಟಗಳನ್ನು ನಡೆಸಲು ಸಾಧ್ಯವಾಗಿದೆಂಬುದನ್ನೂ' ಕಾರ್ಮಿಕ ವರ್ಗದ ಐಕ್ಯ ಹೋರಾಟವೆಂಬ ಸಿ. ಐ. ಟಿ. ಯು. ಘೋಷಣೆಯನ್ನು ನಾವು ಯಾವ ರೀತಿ ಜಾರಿಯಲ್ಲಿ ತಂದಿದ್ದೇವೆಂದೂ, ಅಂಥ ಹೋರಾಟಗಳಲ್ಲಿ ಚಂಚಲತೆಗಳು ಉಂಟಾದುವೆಂದೂ, ಅವುಗಳನ್ನು ನಾವು ಯಾವ ರೀತಿ ಬಗೆಹರಿಸಿದ್ದೇವೆಂದೂ ವಿವರಿಸಿದರು.

ಸಂಘಟಿತ ಕಾರ್ಮಿಕ ವರ್ಗ ಯಾವ ರೀತಿ ರೈತರ ಕೃಷಿ ಕಾರ್ಮಿಕರ ಹೋರಾಟಗಳಲ್ಲಿ ಪಾಲ್ಗೊಂಡು ಸಹಾಯಮಾಡಿರುವುದನ್ನು ವಿವರಿಸಿದರು. ಕೃಷಿ ಕಾರ್ಮಿಕರ ಮತ್ತು ರೈತರ ಚಳುವಳಿಯನ್ನು ಮುಂದಕ್ಕೊಯ್ಯಲಿಕ್ಕೆ ಸಹಾಯಾರ್ಥವಾಗಿ ತಮಿಳುನಾಡಿನ ಸಿ. ಐ. ಟಿ. ಯು. ರಾಜ್ಯ ಸಮಿತಿ ಪ್ರತಿಯೊಬ್ಬ ಕಾರ್ಮಿಕನಿಂದ ವರ್ಷಕ್ಕೆ ಒಂದು ರೂಪಾಯಿ ವಸೂಲಿ ಮಾಡಲು ನಿರ್ಧರಿಸಿರುವುದನ್ನು ಉದಾಹರಿಸಿದರು. ಸರ್ವಾಧಿಕಾರಿ ಶಕ್ತಿಗಳಿಂದ, ಛಿದ್ರಕಾರರಿಂದ ಪ್ರಜಾಪ್ರಭುತ್ವಕ್ಕೆ. ದೇಶದ ಇಕ್ಯತೆಗೆ ಧಕ್ಕೆ ಬಂದಾಗ ನಮ್ಮ ಸಿ.ಐ.ಟಿ. ಯು. ಜೀವದ ಹಂಗು ಬಿಟ್ಟು ರಾಜಕೀಯವಾಗಿ ಯಾವ ರೀತಿ ಹೋರಾಡಿನೆಂಬುದನ್ನು ವಿವರಿಸಿ, ಅಸ್ಸಾಂ, ಪಂಜಾಬ ಕಾಮ್ರೇಡ್ಸರ ತ್ಯಾಗ, ಬಲಿದಾನವನ್ನು ಪ್ರಶಂಸಿಸಿದರು. ಆಂಧ್ರದ ಎನ್. ಟಿ. ಆರ್. ಸರ್ಕಾರವನ್ನು ಕಿತ್ತೊಗೆದಾಗ, ಪ್ರಜಾಪ್ರಭುತ್ವದ ರಕ್ಷಣೆಗಾಗಿ ಇಡೀ ದೇಶದ ಕಾರ್ಮಿಕ ವರ್ಗ, ಸಿ. ಐ. ಟಿ. ಯು ಯಾವ ರೀತಿ ಮುಂದಳದಲ್ಲಿ ಕಾರ್ಯ ಪ್ರವೃತ್ತವಾಗಿತ್ತೆಂಬುದನ್ನು ಹೆಮ್ಮೆಯಿಂದ ತಿಳಿಸಿ ಹೇಳಿದರು.

ರೈತರ ಸಭೆ

4-10-84 ರಂದು ಪಾಮಂಜೂರು ಪ್ರದೇಶದ ರೈತ ಸಭೆ ಜರಗಿತು ಸಭೆ ಕರೆದ ಉದ್ದೇಶವನ್ನು ಕಾ|| ಗಂಗಯ್ಯನವರು ವಿವರಿಸಿದರು ಸಭೆಯಲ್ಲಿ ದ. ಕ. ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಯು. ಜನಾರ್ಧನ ನಾಯ್ಕ್ ರವರು ರೈತರಿಗಾಗುವ ತೊಂದರೆಯನ್ನು ವಿವರಿಸಿದರು ಭೂ ಸುಧಾರಣ ಕಾನೂನಿನ ಮೂಲಕ ಟ್ರಿಬ್ಯೂನಲ್ ಕೋರ್ಟ್ ಗಳಲ್ಲಿ ತೀರ್ಮಾನ ಆದರೂ ಕೂಡ ಈಗಲೂ ಬೇರೆ ಬೇರೆ ನೆವ ಹೂಡಿ ರೈತರಿಗೆ ಕಿರುಕುಳ ಕೊಡುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು ಈ ಬಗ್ಗೆ ಪ್ರತಿ ಗ್ರಾಮಗಳಲ್ಲಿ ರೈತರ ಗ್ರಾಮ ಸಮಿತಿಗಳನ್ನು ರಚಿಸಿ ಇದನ್ನು ಪ್ರತಿಭಟಿಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ 10 ಮಂದಿಯ ರೈತರ ಕಮಿಟಿಯನ್ನು ಚುನಾಯಿಸಲಾಯಿತು.

○

ಸಂಸಧೀಯ ಸರಕಾರ ಹಾಗು ಅಧ್ಯಕ್ಷೀಯ ಸರಕಾರ

ಒಂದು ಪರಿಶೀಲನೆ

ಕನ್ನಡಕ್ಕೆ : ಜೆ. ಕಾ. ಮೂರ್ತೀಶ್ವರಯ್ಯ

ಮೂಲ : ನ್ಯಾಯಮೂರ್ತಿ ಶ್ರೀ ಹೆಚ್. ಆರ್. ಖನ್ನಾ

ಈಗಿರುವ ಸಂಸಧೀಯ ಪದ್ಧತಿಯ ಸರಕಾರಕ್ಕೆ ಬದಲಾಗಿ ಅಧ್ಯಕ್ಷೀಯ ಪದ್ಧತಿಯ ಸರಕಾರವನ್ನು ತರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವುದು ಕಂಡು ಬರುತ್ತಿದೆ. ಈ ಅಭಿಪ್ರಾಯದ ಬೆಂಬಲಿಗರು ಸಂಸಧೀಯ ಪದ್ಧತಿ ಸರಕಾರದಲ್ಲಿ ಕಂಡು ಬಂದ ಸೋಲು ಮತ್ತು ಕೊರತೆಯನ್ನು ಎತ್ತಿ ತೋರಿಸಿದ್ದಾರೆ. ಸಂವಿಧಾನಕ್ಕೆ ತರುವ ಯಾವುದೇ ತಿದ್ದುಪಾಟು ಮತ್ತು ಇಂತಹ ತಿದ್ದುಪಾಟುಗಳಿಂದ ಯಾವುದೇ ರೀತಿಯ ಸಂವಿಧಾನಾತ್ಮಕ ಸಮಸ್ಯೆಗಳು ಉದ್ಭವಿಸುವುದು ಅನಿವಾರ್ಯ. ಆದ್ದರಿಂದ ಇಂಥ ಮಾರ್ಪಾಟನ್ನು ಅತಿ ಧೀರ್ಘಾಲೋಚನೆಯ ನಂತರ ಸ್ವಾಗತಿಸಬೇಕಾಗುತ್ತದೆ.

ಸಂವಿಧಾನ ಎಂದರೆ ಒಂದು ರಾಷ್ಟ್ರಕ್ಕೆ ಸಂಬಂಧಿಸಿದ ಮೂಲ ಕಾಯ್ದೆ. ಅದು ಒಂದು ಜೀವಂತ ವಸ್ತು. ಅದು ಒಂದು ಅಥವ ಎರಡು ತಲೆಮಾರಿಗೆ ಸಂಬಂಧಿಸಿದುದಷ್ಟೇ ಅಲ್ಲ; ಬರಲಿರುವ ಹಲವಾರು ತಲೆಮಾರುಗಳಿಗೂ ಸಂಬಂಧಿಸಿದುದೇ ಆಗಿರುತ್ತದೆ. ಸಂವಿಧಾನದ ರಚನೆಗೇ ಶ್ರೇಷ್ಟಮಟ್ಟದ ರಾಜಕೀಯ ಶಾಸ್ತ್ರದ ಕೌಶಲ್ಯತೆ ಅಗತ್ಯವಾಗಿರುತ್ತದೆ. ಈ ಸಂವಿಧಾನ ರಚಿಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿರುತ್ತದೆಯೋ ಅವರುಗಳು ಸರಕಾರದ ಅಗತ್ಯತೆಗಳನ್ನು ನೋಡಿಕೊಳ್ಳಬೇಕು ಮತ್ತು ಅದೇ ಸಮಯಕ್ಕೆ ಯಾವ ಆದರ್ಶಗಳು ಉತ್ತಮ ರಾಷ್ಟ್ರ ರಚನೆಗೇ ಸ್ಫೂರ್ತಿ ನೀಡಿರುತ್ತವೆಯೋ ಆ ಆದರ್ಶಗಳನ್ನು ಕಾಪಾಡಿಕೊಂಡು ಬರ ಬೇಕಾಗಿರುತ್ತದೆ. ಒಂದು ರಾಷ್ಟ್ರದ ಇತಿಹಾಸದಲ್ಲಿ ಯಾವುದೇ ಒಂದು ತಲೆಮಾರಿನವರು ಸಂವಿಧಾನವನ್ನು ರಚಿಸಲು ಪ್ರಯತ್ನಿಸಿದ್ದೇ ಆದರೆ ಅದೊಂದು ಅತ್ಯುನ್ನತ ಸಾಂಧರ್ಭಿಕ ಕ್ರಿಯೆಯಾಗಿರುತ್ತದೆ ಎಂದು ಹೇಳಬೇಕಾಗುತ್ತವೆ. ಇಂಥ ಸಂದರ್ಭಗಳು ಸಾಮಾನ್ಯವಾಗಿ ಬರುವುದಿಲ್ಲ. ಆದ್ದರಿಂದ ಸಂವಿಧಾನವನ್ನು ರಚಿಸುವ ಅವಕಾಶವನ್ನು ಯಾರಿಗೆ ವಹಿಸಿದರೂ ಅವರುಗಳಿಗೆ ತಮ್ಮ ಮತ್ತು ತಮಗೆ ವಹಿಸಿರುವ ಪಾತ್ರದ ಬಗ್ಗೆ ಖಚಿತವಾದ ತಿಳುವಳಿಕೆ ಇರಬೇಕಾಗುತ್ತವೆ. ನಾಳಿನ ತಲೆಮಾರಿನವರಾದ ಗಂಡು, ಹೆಣ್ಣು ಮತ್ತು ಮಕ್ಕಳುಗಳ ಬದುಕಿನ ಬಗ್ಗೆ ಮಾರ್ಗ ಮತ್ತು ಅವರ್ರುಗಳ ಸುಖ ಸಂತೋಷದ ಕಲ್ಪನೆಯನ್ನು ಮೊದಲಿಗೆ ಈ ರಚನ ಧುರೀಣರು ತಮ್ಮ ಬುದ್ಧಿಶಕ್ತಿ, ಪ್ರತಿಭೆ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಅಂಥವರ ಧೀರ್ಘಾಲೋಚನೆಯ ಮೇಲೆ ರಾಷ್ಟ್ರದ ಆಡಳಿತ ಶಾಸ್ತ್ರದ ಕಲ್ಪನೆ ಅವಲಂಬಿಸಿರುತ್ತವೆ.

ಭಾರತದ ಸಂವಿಧಾನವನ್ನು ರಚಿಸಲು ಯಾರಿಗೆ ವಹಿಸಲಾಗಿತ್ತೋ ಅವರುಗಳು ತಮ್ಮ ಐತಿಹಾಸಿಕ ಪಾತ್ರದ ಅರ್ಹತೆಯನ್ನು ಮತ್ತು ತಮಗೆ ವಹಿಸಿದ ಕರ್ತವ್ಯದ ವ್ಯಾಪ್ತಿ ಮತ್ತು ಮಹತ್ವಗಳನ್ನು ಅರಿತವರಾಗಿದ್ದರು. ರಾಜಕೀಯತೆ ಯಾವ ಮೌಲ್ಯಗಳಿಗೆ ಬದ್ಧವಾಗಿತ್ತೋ ಯಾವ ಆದರ್ಶಗಳಿಗೆ ಅಧೀನವಾಗಿತ್ತೊ ಮತ್ತು ಆಡಳಿತದ ಉಳಿವಿಗಾಗಿ ಅಗತ್ಯ ಕಂಡು ಬಂದಲ್ಲಿ ಕಷ್ಟಗಳನ್ನು ಅನುಭವಿಸಲು ಸಿದ್ಧವಾಗಿತ್ತೋ ಅಂತಹ ಶ್ರೇಷ್ಠ ಪ್ರತಿಭಾವಂತರ ರಾಜ್ಯಶಾಸ್ತ್ರ ನಿಪುಣರ ಸಮೂಹ ಸಂವಿಧಾನ ರಚನಾ ಸಭೆಯಲ್ಲಿ ಪ್ರತಿನಿಧಿಸಲ್ಪಟ್ಟವರಾಗಿದ್ದರು. ಆದ್ದರಿಂದ ಸರಕಾರದ ಆಡಳಿತ ಪದ್ಧತಿಯನ್ನು ಬದಲಾಯಿಸುವ ಯಾವುದೇ ಕ್ರಮಗಳನ್ನು ತರುವಾಗ ಅದನ್ನು ಧೀರ್ಘಾಲೋಚನೆಯ ನಂತರ ಸ್ವೀಕರಿಸಬೇಕು. ದೈನಂದಿನ ವ್ಯವಹಾರಗಳನ್ನು ನಿರ್ವಹಿಸಲು ಸಾಮಾನ್ಯ ಕಾನೂನುಗಳಿರುತ್ತವೆ. ಆದರೆ ಸಂವಿಧಾನ ಭಿನ್ನವಾಗಿರುತ್ತದೆ. ಸಾಮಾನ್ಯ ಕಾನೂನುಗಳನ್ನು ಸಂಕೀರ್ಣ ಪರಿಸ್ಥಿತಿಗಳಿಗೆ ತಕ್ಕಂತೆ ತಿದ್ದುಪಡಿ ಮಾಡಿಕೊಳ್ಳಬಹುದು. ತೀರ್ಮಾನ ತೆಗೆದುಕೊಳ್ಳಬೇಕಾದ ತಾತ್ಕಾಲಿಕ ಸಮಯಕ್ಕೆ ಸಂಬಂಧಿಸಿದ ನಿಯಮ ನಿಬಂಧನೆಗಳನ್ನು ಸಂವಿಧಾನ ತಿಳಿಸುವುದಿಲ್ಲ. ಆದರೆ ವಿಶಾಲ ಭವಿಷ್ಯತ್ತನ್ನು ರೂಪಿಸುವ ಲಕ್ಷಣ ಮತ್ತು ಆದರ್ಶಗಳನ್ನು ತಿಳಿಸುವುದೇ ಸಂವಿಧಾನದ ಕರ್ತವ್ಯ.

ಸಂವಿಧಾನದಲ್ಲಿ ಪರಿಪೂರ್ಣತೆ ಇದೆ ಎಂದು ಇದರ ಅರ್ಥವಲ್ಲ. ಸಂವಿಧಾನವೂ ಮನುಷ್ಯ ನಿರ್ಮಾಣವಾದದ್ದರಿಂದ ಅದು ಪರಿಪೂರ್ಣವಾಗಲಾರದು. ಮನುಷ್ಯ ನಿರ್ಮಿಸಿದ ಎಲ್ಲಾ ನೀತಿ ನಿಯಮಗಳಲ್ಲಿ ತಪ್ಪುಗಳು ಕಂಡು ಬರುವಂತೆ ಸಂವಿಧಾನದಲ್ಲೂ ದೋಷಗಳು ಕಂಡು ಬರುತ್ತವೆ. ಅದು ತಪ್ಪುಗಳಿಂದ ಸಂಪೂರ್ಣ ಮುಕ್ತ ಎಂದು ಹೇಳಲು ಬರುವುದಿಲ್ಲ. ದೈನಂದಿನ ಕರ್ತವ್ಯಗಳನ್ನು ನಿರ್ವಹಿಸುವ ಸಂದರ್ಭಗಳಲ್ಲಿ ಸಂವಿಧಾನಗಳು ಸಂಕ್ರಮಣ ಕಾಲವನ್ನು ಎದುರಿಸ ಬೇಕಾಗಿರುತ್ತಿ ಎಂಬ ಅರಿವು ಸಂವಿಧಾನದ ರಚನಕಾರರಲ್ಲಿತ್ತು ಎಂದು ಹೇಳಬಹುದು. ಈ ಕಾರಣಕ್ಕಾಗಿಯೆ ಸಂವಿಧಾನದ ತಿದ್ದುಪಡಿಯ ವಿಧಿಯನ್ನು ಅಳವಡಿಸಿರುವುದು. ದೈನಂದಿನ ವ್ಯವಹಾರಗಳಲ್ಲಿ ತಲೆದೋರಬಹುದಾದ ಸಂಕ್ರಮಣ ಸ್ಥಿತಿಗಳನ್ನು ಎದರಿಸಲು ಸಂವಿಧಾನಕ್ಕೆ ತಿದ್ದುಪಡಿ ಇರಬೇಕು. ಈ ರೀತಿಯ ತಿದ್ದುಪಡಿಯ ಕ್ರಮಕ್ಕೆ ನನ್ನ ವಿರೋಧವಿಲ್ಲ. ಆದರೆ ಪ್ರತಿಯೊಂದು ಸಣ್ಣ ಪುಟ್ಟ ಅಡಚಣೆಗೂ ಸಂವಿಧಾನಕ್ಕೆ ತಿದ್ದುಪಡಿ ತರುವುದು ಸರಿಯಲ್ಲ. ಪ್ರತಿಯೊಂದು ಸಂಶ್ರಮಣಾವಸ್ಥೆಯನ್ನು ನಿವಾರಿಸಲು ಸಂವಿಧಾನಕ್ಕೆ ತಿದ್ದುಪಡಿ ತರುವುದೆಂದರೆ ಮಾತ್ರ ನಮ್ಮ ವಿರೋಧ. ಈಗಿರುವ ನಮ್ಮ ಸಂವಿಧಾನಕ್ಕೆ ಹಲವಾರು ಭಾರಿ ತಿದ್ದುಪಡಿ ಮಾಡಲಾಗಿದೆ. ನಮ್ಮ ಸಂವಿಧಾನದಲ್ಲಿ ಎರಡು ವಿಶಿಷ್ಟವಾದ ಮಹತ್ವಗಳನ್ನು ನೋಡುತ್ತೇವೆ. ಇಡೀ ವಿಶ್ವದಲ್ಲೇ ಇದು ದೀರ್ಘ ಸಂವಿಧಾನವಾಗಿದೆ. ಅಲ್ಲದೆ ಅತಿ ಹೆಚ್ಚಿನ ತಿದ್ದುಪಡಿಗಳಿಗೆ ಒಳಪಟ್ಟಿದೆ. ಇದೇ ಇವರ ವೈಶಿಷ್ಟ್ಯ.

ಸಂವಿಧಾನ ರಚನಾ ಸಭೆಯ ಸದಸ್ಯರು ಆರಂಭದಿಂದಲೂ ನಮ್ಮ ಸರಕಾರ ಪ್ರಜಾಸತ್ತಾತ್ಮಕ ಲಕ್ಷಣಗಳನ್ನು ಹೊಂದಿರಬೇಕು ಎಂಬ ಅಂಶವನ್ನು ಸ್ಪಷ್ಟವಾಗಿ ತಿಳಿದು ಕೊಂಡಿದ್ದರು. ಅವರು ತಮ್ಮ ಮುಂದೆ ಮೂರು ಮಾದರಿಯ ವ್ಯವಸ್ಥೆಗಳನ್ನು ಇಟ್ಟು ಕೊಂಡಿದ್ದರು. ಅಮೇರಿಕಾದ ಅಧ್ಯಕ್ಷೀಯ ವ್ಯವಸ್ಥೆ, ಬ್ರಿಟನ್ನಿನ ಸಂಸಧೀಯ ವ್ಯವಸ್ಥೆ, ಸ್ವಿಜರ್ ಲ್ಯಾಂಡಿನ ಚುನಾಯಿತ ಕಾರ್ಯಾಂಗ ವ್ಯವಸ್ಥೆ. ಮೂರು ವ್ಯವಸ್ಥೆಗಳಲ್ಲಿ ಯಾವುದಾದರೊಂದು ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವುದೋ ಅಥವ ಈ ಮೂರು ವ್ಯವಸ್ಥೆಗಳ ಸಂಶ್ಲೇಷಣೆಯಿಂದ ಕಾರ್ಯಗತವಾಗುವಂಥ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವುದೋ ಎಂಬುವುದು ಅವರ ಮುಂದಿದ್ದ ಪ್ರಶ್ನೆ. ಕೆಲವು ಮಾರ್ಪಾಡುಗಳೊಂದಿಗೆ ಬ್ರಿಟನ್ ಸಂಸಧೀಯ ಸರಕಾರದ ವ್ಯವಸ್ಥೆಯನ್ನು ಅಂದಿನ ರಚನಾ ಸಭೆ ಆಯ್ಕೆ ಮಾಡಿಕೊಂಡಿತು. ಐದು ವರ್ಷಗಳಿಗೊಮ್ಮೆ ಅಪ್ರತ್ಯಕ್ಷ ಚುನಾವಣೆಗಳ ಮೂಲಕ ಆಯ್ಕೆ ಯಾಗುವ, ಸಂವಿಧಾನಾತ್ಮಕವಾಗಿ ಅತ್ಯುನ್ನತ ವ್ಯಕ್ತಿ ಒಬ್ಬ ರಾಷ್ಟ್ರಪತಿ ಇರಬೇಕೆಂದು ಅಂದಿನ ರಚನಾ ಸಭೆ ತೀರ್ಮಾನಿಸಿತು. ಭಾರತದ ಸಂಸಧಾನ ಸಭೆಯು ಬ್ರಿಟನ್ನಿನ ಸಂಸಧೀಯ ಸರಕಾರದ ವ್ಯವಸ್ಥೆಯನ್ನೂ ಆಯ್ಕೆ ಮಾಡಿಕೊಳ್ಳಲು ಕಾರಣವೇನೆಂದರೆ, ಭಾರತವು ಬಹುಕಾಲ ಬ್ರಿಟನ್ನಿನೊಡನೆ ಮೈತ್ರಿಯಿಂದ ಕೂಡಿತ್ತು. ಬ್ರಿಟನ್ ಮಾದರಿಯ ವ್ಯವಸ್ಥೆ ಅತಿ ಸಮರ್ಪಕವಾದ ವ್ಯವಸ್ಥೆ ಎಂದು ಭಾರತದ ಸಾರ್ವಜನಿಕ ಮುಖಂಡರು ಕಂಡು ಕೊಂಡಿದ್ದರು, ಎಂದು ಶ್ರೀ ಕೆ. ಎಂ. ಮುನಿಷಿ ಹೇಳುತ್ತಾರೆ. ಭಾರತದ ಸಂವಿಧಾನದ ರಚನಾ ಸಭೆಯಲ್ಲಿ ಕೆಲವು ಮುಸ್ಲಿಂ ಸದಸ್ಯರು "ಸ್ವಿಸ್" ನಲ್ಲಿರುವ ಚುನಾಯಿತ ಮಂತ್ರಿಗಳ ಆಡಳಿತ ವ್ಯವಸ್ಥೆಯನ್ನು ಬಯಸಿದರು. ದಾಮಾಷಾ ಪ್ರಾತಿನಿಧ್ಯಗಳ ಪ್ರಕಾರ, ಶಾಸಕರು ವರ್ಗಾಯಿಸ್ಪಡುವ ಏಕ ಮತವನ್ನು ಚಲಾಯಿಸುವ ಆಧಾರದ ಮೇಲೆ, ಸಚಿವ ಸಂಪುಟದ ಚುನಾವಣೆ ನಡೆಸಬೇಕೆಂದು ಓರ್ವ ಪ್ರತಿನಿಧಿಯು ಮಸೂದೆಯೊಂದನ್ನು ಮಂಡಿಸಿದರು. ಮತ್ತೊಬ್ಬ ಪ್ರತಿನಿಧಿ "ಕಾಜಿಕಾರಿಮುದ್ದಿನ್"ವವರು ಎಂಬುದು ಸಂಸಧೀಯರಹಿತ ಕಾರ್ಯಾಂಗ ವ್ಯವಸ್ಥೆಯನ್ನು ಬಯಸಿದರು. ಪ್ರಮಾಣಾನುವಾದ ಪ್ರಾತಿನಿಧ್ಯ ಪ್ರಕಾರ ಸಂಸತ್ತಿನ ಕೆಳ ಮನೆಯ ಸದಸ್ಯರು ವರ್ಗಾಭಿಮತ ಏಕ ಮತವನ್ನು ಚಲಾಯಿಸುವ ಮುಖಾಂತರ ಪ್ರಧಾನ ಮಂತ್ರಿಯನ್ನು ಚುನಾಯಿಸಬೇಕಾಗುತ್ತದೆ. ಮತ್ತು ಇತರೇ ಮಂತ್ರಿಗಳನ್ನು ವರ್ಗಾಭಿಮತ ಏಕ ಮತವನ್ನು ಚಲಾಯಿಸದೆ ಇರುವುದರ ಮುಖಾಂತರ ಆಯ್ಕೆ ಮಾಡಬೇಕಾಗುತ್ತವೆ. ಶಾಸನ ಸಭೆಯ ಅವಧಿಯೇ ಮಂತ್ರಿಗಳ ಅವಧಿ ಕೂಡ. ಭ್ರಷ್ಟಾಚಾರ ಅಥವ ದೇಶ ದ್ರೋಹದ ಆಧಾರದ ಮೇಲೆ ಒಬ್ಬ ಮಂತ್ರಿಯನ್ನು ತೆಗೆದು ಹಾಕಲು ಅವಕಾಶವಿರುತ್ತವೆ. ಓರ್ವ ಪ್ರತಿನಿಧಿಯ ಪ್ರಕಾರ ಭಾರತದ ವ್ಯವಸ್ಥೆ ಸ್ವಜನ ಪಕ್ಷಪಾತ, ಸಾನುಗ್ರಹ ಅಧಿಕಾರದ ದುರುಪಯೋಗದ ಆಧಾರದ ಮೇಲೆ ನಡೆಯುತ್ತಿದೆ. ಎಂಬ ಆರೋಪ ಹೊಂದಿದೆ. ಮತ್ತೊಬ್ಬ ಮುಸ್ಲಿಂ ಪ್ರತಿನಿಧಿಯ ಪ್ರಕಾರ ಅಮೇರಿಕಾ ಮಾದರಿಯ ವ್ಯವಸ್ಥೆಯಲ್ಲಿರುವ ರಾಷ್ಟ್ರಪತಿ ತನಗೆ ಬೇಕಾದ ಮಂತ್ರಿಗಳನ್ನು ಆಯ್ಕೆ ಮಾಡುವುದರಲ್ಲಿ ಸ್ವಾತಂತ್ರ್ಯ ಹೊಂದಿದ್ದು ಆ ವ್ಯವಸ್ಥೆ ಬ್ರಿಟನ್ ವ್ಯವಸ್ಥೆಗಿಂತ ಆದರ್ಶದ ಮೇಲೆ ಆದರಿಸಿದೆ ಎಂಬುದು. ಸಂವಿಧಾನ ಸಮಿತಿಯ ಚಕ್ರೂಟ ಅಧ್ಯಕ್ಷರಾಗಿದ್ದ ನೆಹರೂ ತಮ್ಮ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸುತ್ತ ಈ ರೀತಿ ಹೇಳಿದರು-- "ಅಧ್ಯಕ್ಷೀಯ ಸರಕಾರದ ವ್ಯವಸ್ಥೆಯಲ್ಲಿ ಅಸ್ತಿತ್ವಕ್ಕೆ ಬರುವ ಸರಕಾರ ಮತ್ತು ಸಚಿವ ಸಂಪುಟ ದಾಮಾಷಾ ಪ್ರಕಾರ ಆಯ್ಕೆಯಾದ ಪ್ರತಿನಿಧಿಗಳ ಸರಕಾರಕ್ಕಿಂತ ದುರ್ಬಲವಾಗಿರುತ್ತವೆ. ಆದರೆ ಸಂಸಧೀಯ ಸರಕಾರದ ವ್ಯವಸ್ಥೆಯಲ್ಲಿ ಈ ರೀತಿ ಇರುವುದಿಲ್ಲ" ನೆಹರೂರವರು ಮಂತ್ರಿಗಳ ಅಧಿಕಾರದ ನಿಯಮಿತ ಅವಧಿಯನ್ನು ವಿರೋಧಿಸಿದರು. ಅವರು ಈ ರೀತಿ ಹೇಳಿದ್ದರು— "ನಿಮ್ಮ ಸಂವಿಧಾನಕ್ಕೆ ಯಾವ ರೂಪ ಕೊಡಲಿದ್ದೀರಿ ಎಂಬುವುದರ ಮೇಲೆ ಅದು ಅವಲಂಬಿಸುತ್ತದೆ. ಮಂತ್ರಿಗಳನ್ನು ಹೊಂದಿರುವ ಸಂಸಧೀಯ ವ್ಯವಸ್ಥೆಯೋ ಅಥವ ಅಮೇರಿಕಾ ಮಾದರಿಯ ವ್ಯವಸ್ಥೆಯೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಲ್ಲಿಯ ತನಕ ನಾವುಗಳು ಮಂತ್ರಿಗಳನ್ನು ಹೊಂದಿದ್ದ ಸಂಸದೀಯ ಮಾದರಿಯ ಮುಖ ಮಾಡಿ ನಡೆದಿದ್ದೆವು. ಈಗ ನಾವು ಹಿಂದಕ್ಕೆ ನಡೆಯಲಾರೆವು. ಸಂವಿಧಾನ ರಚನಾ ಸಭೆ ಸಂಸಧೀಯ ಕಾರ್ಯಾಂಗದ ಲಕ್ಷಣಗಳನ್ನು ಒಪ್ಪಿಕೊಂಡು ಲೋಕ ಸಭೆಗೆ ಜವಾಬ್ದಾರಿಯಾಗಿರುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಇಚ್ಛಿಸಿತು.

ಭಾರತ ಮತ್ತು ಅಮೇರಿಕಾಗಳಲ್ಲಿ ರಾಷ್ಟ್ರಾಧ್ಯಕ್ಷರು ಇದ್ದರೂ ಸಹ ಈ ಎರಡೂ ರಾಷ್ಟ್ರಗಳ ನಡುವೆ ಏಕತೆ ಏನೂ ಇಲ್ಲ, ಎಂದು ಸಂವಿಧಾನ ರಚನಾ ಸಭೆಯಲ್ಲಿ ಡಾ|| ಬಿ. ಆರ್. ಅಂಬೇಡ್ಕರ್ ರವರು ಹೇಳಿರುವುದು ಸಮಂಜಸವಾಗಿದೆ. ಅಮೇರಿಕಾದಲ್ಲಿ ರಾಷ್ಟ್ರಾಧ್ಯಕ್ಷರು ಕಾರ್ಯಾಂಗದ ಉನ್ನತ ವ್ಯಕ್ತಿಯಾಗಿದ್ದು ಮತ್ತು ರಾಷ್ಟ್ರದ ಆಡಳಿತ ವ್ಯವಸ್ಥೆ ರಾಷ್ಟ್ರಪತಿಯ ಅಧಿಕಾರಕ್ಕೆ ಒಳಪಟ್ಟಿರುತ್ತವೆ. ನಮ್ಮ ಸಂವಿಧಾನದಲ್ಲಿ ಬ್ರಿಟನ್ ರಾಷ್ಟ್ರದ ರಾಜ ಆಕ್ರಮಿಸಿರುವ ಸ್ಥಾನವನ್ನು ಭಾರತದಲ್ಲಿನ ರಾಷ್ಟ್ರಾಧ್ಯಕ್ಷರು ಅಲಂಕರಿಸಿರುತ್ತಾರೆ. ರಾಷ್ಟ್ರಪತಿ ಇಲ್ಲಿನ ಅತ್ಯುನ್ನತ ವ್ಯಕ್ತಿ. ಆದರೆ ಕಾರ್ಯಾಂಗಕ್ಕೆ ಅಲ್ಲ. ರಾಷ್ಟ್ರಪತಿ ರಾಷ್ಟ್ರವನ್ನು ಪ್ರತಿನಿಧಿಸುತ್ತಾರೆ. ಆದರೆ ರಾಷ್ಟ್ರದ ಆಡಳಿತವನ್ನು ನಡೆಸುವುದಿಲ್ಲ. ರಾಷ್ಟ್ರಪತಿ ರಾಷ್ಟ್ರದ ಹಿರಿತನದ ಒಂದು ಸಂಕೇತ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಗಳ ಒಪ್ಪಿಗೆಯ ಮುದ್ರೆಯೊಂದಿಗೆ ರಾಷ್ಟ್ರ ಕೈಗೊಂಡ ತೀರ್ಮಾನಗಳನ್ನು ತಿಳಿಸಲಾಗುವುದು. ಅಷ್ಟಕ್ಕೆ ಮಾತ್ರ

ಇಂದು ದೇಶದಲ್ಲಿ ಅಧ್ಯಕ್ಷ ಮಾದರಿಯ ಸರ್ಕಾರ ತರಲು ಕೇಂದ್ರದ ಆಳುವ ಪಕ್ಷವು ತನ್ನ ಪ್ರಯತ್ನಗಳನ್ನು ನಡೆಸುತ್ತಿರುವ ಹಿನ್ನೆಲೆಯಲ್ಲಿ ದೇಶಾದ್ಯಂತ ಈ ಕುರಿತು ಆಳವಾದ ಚರ್ಚೆಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ 'ಐಕ್ಯರಂಗ' ನ್ಯಾಯ ಮೂರ್ತಿ ಶ್ರೀ ಹೆಚ್.ಆರ್. ಖನ್ನಾರವರ ಲೇಖನದ ಕನ್ನಡಾನುವಾದವನ್ನು ಎರಡು ಕಂತುಗಳಲ್ಲಿ ಪ್ರಕಟಿಸುತ್ತಿದೆ. ಈ ಕುರಿತು ಓದುಗರ ಅಭಿಪ್ರಾಯವನ್ನೂ ಸಹ 'ಐಕ್ಯರಂಗ' ಸ್ವಾಗತಿಸುತ್ತದೆ.

ಅವರ ಸ್ಥಾನ. ಅಮೇರಿಕಾದ ಸಂವಿಧಾನದ ಪ್ರಕಾರ, ಸರಕಾರದ ವಿವಿಧ ಇಲಾಖೆಗಳ ಕಾರ್ಯದರ್ಶಿಗಳು, ರಾಷ್ಟ್ರಪತಿಗಳ ಕೈ ಕೆಳಗೆ ಕಾರ್ಯ ನಿರ್ವಹಿಸುತ್ತಾರೆ.

ಭಾರತದಲ್ಲಿ ಆಡಳಿತ ವ್ಯವಸ್ಥೆಯನ್ನು ನಿರ್ವಹಿಸಲು ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಮಂತ್ರಿಗಳಿದ್ದು, ಇವರುಗಳು ರಾಷ್ಟ್ರಪತಿಗಳ ಕೈ ಕೆಳಗೆ ಕಾರ್ಯ ನಿರ್ವಹಿಸುತ್ತಾರೆ. ಕಾರ್ಯದರ್ಶಿಗಳು ಕೊಡಬಹುದಾದ ಯಾವುದೇ ಸಲಹೆಗೆ ಅಮೇರಿಕಾದ ರಾಷ್ಟ್ರಾಧ್ಯಕ್ಷ ಬದ್ಧನಾಗಿರುವುದಿಲ್ಲ. ಆದರೆ ಭಾರತದ ರಾಷ್ಟ್ರಪತಿ ಮಂತ್ರಿಗಳು ಕೊಡಬಹುದಾದ ಸಲಹೆಗೆ ಬದ್ಧನಾಗಿರ ಬೇಕಾಗುತ್ತದೆ. ಮಂತ್ರಿಗಳು ಕೊಡಬಹುದಾದ ಯಾವುದೇ ಸಲಹೆಗೆ ರಾಷ್ಟ್ರಪತಿಯು ವಿರೋಧವಾಗಿ ನಡೆಯುವಂತಿಲ್ಲ. ಹಾಗೂ ಸ್ವತಃ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವಂತಿಲ್ಲ. ಅಮೇರಿಕಾದ ರಾಷ್ಟ್ರಾಧ್ಯಕ್ಷನಿಗೆ ಯಾವುದೇ ಕಾರ್ಯದರ್ಶಿಯನ್ನು ಯಾವುದೇ ಸಮಯದಲ್ಲಿ ವಜಾ ಮಾಡಲು ಅಧಿಕಾರವಿರುತ್ತದೆ. ಭಾರತದ ರಾಷ್ಟ್ರಾಧ್ಯಕ್ಷ ಆಯ್ಕೆ ಯಾದ ಮಂತ್ರಿಗಳು ಸಂಸತ್ತಿನ ಬಹುಮತದ ಬೆಂಬಲ ಹೊಂದಿರುವವರೆವಿಗೂ ಈ ರೀತಿಯ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.

ಅಮೇರಿಕಾದ ಪದ್ಧತಿ ಭಿನ್ನ ಭಿನ್ನವಾದ ಕಾರ್ಯಾಂಗ ಮತ್ತು ಶಾಸಕಾಂಗದ ಆಧಾರದ ಮೇಲೆ ಅವಲಂಬಿತವಾಗಿರುವ ಕಾರಣ ರಾಷ್ಟ್ರಾಧ್ಯಕ್ಷ ಮತ್ತು ಅವರ ಕಾರ್ಯದರ್ಶಿಗಳು ಕಾಂಗ್ರೆಸ್ಸಿನ ಸದಸ್ಯರಾಗಿರಲು ಸಾಧ್ಯವಿಲ್ಲ. ನಮ್ಮ ಸಂವಿಧಾನ ಈ ಸೂತ್ರಕ್ಕೆ ಮನ್ನಣೆ ನೀಡಿಲ್ಲ. ಭಾರತದಲ್ಲಿನ ಮಂತ್ರಿಗಳು ಸಂಸತ್ತಿನ ಸದಸ್ಯರಾಗಿರುತ್ತಾರೆ. ಸದಸ್ಯತ್ವವಿಲ್ಲದವರು ಮಂತ್ರಿಗಳಾಗಲು ಸಾಧ್ಯವಿಲ್ಲ. ಸಂಸತ್ತಿನ ಸದಸ್ಯರುಗಳಿಗೆ ಇರುವ ಹಕ್ಕುಗಳೇ ಮಂತ್ರಿಗಳ ಹಕ್ಕುಗಳಾಗಿರುತ್ತವೆ. ಅವರು ಸದನದಲ್ಲಿ ಆಸೀನರಾಗಬಹುದು, ಕಾರ್ಯಕಲಾಪ, ಚರ್ಚೆಗಳಲ್ಲಿ ಭಾಗವಹಿಸಬಹುದು ಮತ್ತು ಸದನದ ವ್ಯವಹಾರದಲ್ಲಿ ಮತವನ್ನು ಚಲಾಯಿಸಬಹುದು.

ಪ್ರಜಾಸತ್ತಾತ್ಮಕ ಕಾರ್ಯಾಂಗ ಎರಡು ಶರತ್ತುಗಳನ್ನು ತೃಪ್ತಿಕರವಾಗಿ ನಿರ್ವಹಿಸಲೇ ಬೇಕಾಗುತ್ತದೆ. ಅದು ಸಮರ್ಥವಾದ ಕಾರ್ಯಾಂಗವಾಗಿರಬೇಕಾದುದಲ್ಲದೆ ಹೊಣೆಗಾರಿಕೆಯನ್ನು ವಹಿಸಬೇಕು. ಈ ಎರಡು ನಿರ್ವಹಣೆಗೆ ಸಾಧ್ಯವಾಗುವ ಯಾವುದೇ ಸಮಾನತೆಯ ಪದ್ಧತಿಯನ್ನು ಇನ್ನೂ ಕಂಡು ಹಿಡಿಯಲಾಗಿಲ್ಲ. ಅಮೇರಿಕಾ ಮತ್ತು ಸ್ವಿಜರ್ ಲ್ಯಾಂಡ್ ಪದ್ಧತಿಗಳು ಹೆಚ್ಚಿನ ಆಧಾರವನ್ನು ನೀಡುತ್ತದೆ. ಆದರೆ ಕಡಿಮೆ ಜವಾಬ್ದಾರಿಯನ್ನು ಹೊಂದಿರುತ್ತದೆ. ಬ್ರಿಟನ್ ಪದ್ಧತಿ ಹೆಚ್ಚು ಜವಾಬ್ದಾರಿಯನ್ನು ಹೊಂದಿರುತ್ತದೆ. ಆದರೆ ಅಸ್ಥಿರವಾಗಿರುತ್ತದೆ. ಸಂಸದೀಯ ರಹಿತ ಕಾರ್ಯಾಂಗದ ವ್ಯವಸ್ಥೆ, ಶಾಸಕಾಂಗಕ್ಕೆ ಕಡಿಮೆ ಜವಾಬ್ದಾರಿಯಾಗಿರುತ್ತವೆ ಯಾಕೆಂದರೆ ಇದು ಸಂಸತ್ತಿನಿಂದ ಸ್ವತಂತ್ರವಾಗಿರುತ್ತದೆ. ಆದರೆ ಸಂಸದೀಯ ಕಾರ್ಯಾಂಗದ ವ್ಯವಸ್ಥೆಯಲ್ಲಿ ಶಾಸಕಾಂಗಕ್ಕೆ ಇದು ಜವಾಬ್ದಾರಿಯಾಗಿರುತ್ತದೆ. ಅಸಂಸದೀಯ ಪದ್ಧತಿಯಲ್ಲಿ ಕಾರ್ಯಾಂಗದ ಹೊಣೆಗಾರಿಕೆಯ ನಿರ್ವಹಣೆಯ ಕಾರ್ಯ ಸಾಮರ್ಥ್ಯ ಸಾವಧಿಯಿಂದ ಕೂಡಿದ್ದು ಅದನ್ನು ಚುನಾವಣೆಯ ಸಮಯದಲ್ಲಿ ಚುನಾಯಿತ ಕ್ಷೇತ್ರ ಸಾಧಿಸುತ್ತದೆ. ಇದಕ್ಕೆ ಪರ್ಯಾಯವಾಗಿ ಸಂಸದೀಯ ಕಾರ್ಯಾಂಗದ ವ್ಯವಸ್ಥೆಯಲ್ಲಿ ಈ ಬಗೆಯ ಜವಾಬ್ದಾರಿಯನ್ನು ದೈನಂದಿಕವಾಗಿ ಮತ್ತು ನಿರ್ದಿಷ್ಟ ಅವಧಿಗೆ ತೀರ್ಮಾನಿಸಲಾಗುತ್ತದೆ. ಈ ನಿರ್ಧಾರವನ್ನು ಪ್ರಶ್ನೆಗಳ, ನಿರ್ಣಯಗಳ ಮತ್ತು ಅವಿಶ್ವಾಸ ನಿರ್ಣಯಗಳ ಮುಖಾಂತರ ಸಂಸತ್ತಿನ ಸದಸ್ಯರು ನಿರ್ಧರಿಸುತ್ತಾರೆ. ಸಾವಧಿಯ ನಿರ್ಧಾರವನ್ನು ಚುನಾವಣೆಗಳ ಸಮಯದಲ್ಲಿ ಮತದಾರರೇ ನಿರ್ವಹಿಸುತ್ತಾರೆ. ಸಂವಿಧಾನ ಸಭೆಯ ಸದಸ್ಯರು ಸ್ಥಿರತೆಗಿಂತಲೂ ಹೆಚ್ಚು ಜವಾಬ್ದಾರಿಯುತವಾದುದನ್ನು ಅಳವಡಿಸಿಕೊಳ್ಳಲು ಇಚ್ಛಿಸಿದರು.

ಭಾರತದಂತಹ ವಿಶಾಲವಾದ ರಾಷ್ಟ್ರದಲ್ಲಿ ಕೇಂದ್ರದಲ್ಲಿ ಸ್ಥಿರತೆಯ ಅಗತ್ಯತೆಯ ಅವಶ್ಯಕತೆ ಬಹಳ ಗಹನವಾದದು ಎಂಬುದನ್ನು ಇಲ್ಲಿಯೆ ನಾವು ಮನಗಾಣಬೇಕು. ಈ ಪ್ರಶ್ನೆ ಹಿಂದೆಂದೂ ತಲೆ ದೋರಿರಲಿಲ್ಲ. ಹಿಂದೆಲ್ಲ ಕೇಂದ್ರದಲ್ಲಿ ಏಕ ಪಕ್ಷೀಯ ಸದಸ್ಯರು ಬಹುಮತದಲ್ಲಿ ಇರುತಿದ್ದರು. ಆದರೆ 1979 ರ ಘಟನೆಗಳು ಇದನ್ನು ತದ್ವಿರುದ್ಧಗೊಳಿಸಿದೆ. ಇದು ಭವಿಷ್ಯತ್ತಿನಲ್ಲಿ ಆಶಾದಾಯಕವಾಗಿರುತ್ತದೆಂದು ಹೇಳಲು ಆಗುವುದಿಲ್ಲ. ಇದರಿಂದಾಗಿ ಬಹಳ ಮುಖ್ಯವಾದ ಪರಿಣಾಮವೆಂದರೆ ಕೇಂದ್ರದಲ್ಲಿ ಆಡಳಿತ ನಿರ್ವಹಿಸುವ ಸರಕಾರನ್ನು ದುರ್ಬಲಗೊಳಿಸುತ್ತವೆ. ನಮ್ಮಗಳಿಗೆ ಇದು ಭಯಗೊಳಿಸುವ ವಿಚಾರ. ರಾಜ್ಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಕಾಪಟ್ಯದಿಂದಾಗಲಿ ಸೋಲಾಗಲಿ, ಆಡಳಿತ ನಿರ್ವಹಣೆಯ ಶೈಥಿಲ್ಯವಾಗಲಿ ಕಂಡು ಬಂದ ರಾಷ್ಟ್ರಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗುವುದಿಲ್ಲ. ಆದರೆ ದುರ್ಬಲವಾದ ಕೇಂದ್ರ ಸರಕಾರವು ನಮ್ಮ ರಾಷ್ಟ್ರ ಸ್ವಾತಂತ್ರ್ಯವನ್ನು ನಮ್ಮಗಳ ಅಸ್ತಿತ್ವವನ್ನು ಬೇರು ಸಹಿತ ಅಲುಗಾಡಿಸಲೂ ಬಹುದು. ಅದು ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಹುದು ಮತ್ತು ಐಕ್ಯತೆಗೆ ಹಾಗು ರಾಷ್ಟ್ರದ ಅಡಿಪಾಯಕ್ಕೆ ಅಪಾಯವನ್ನು ಉಂಟು ಮಾಡಲೂಬಹುದು. ಮೊದಲನೆಯ ಮಹಾ ಯುದ್ಧದ ಸಮಯದಲ್ಲಿ ಮತ್ತು ಹಿಟ್ಲರ್ ತನ್ನ ಅಧಿಕಾರಕ್ಕೆ ಮೇಲೇರುತಿದ್ದ ಕಾಲದಲ್ಲಿ ಜರ್ಮನ್ ಗಣರಾಜ್ಯವು ದುರ್ಬಲಗೊಳ್ಳಲು ಕಾರಣವೇನೆಂದರೆ ಆ ಸಮಯದಲ್ಲಿ ರಚಿತವಾದ ಕೇಂದ್ರ ಸರ್ಕಾರಗಳು ಅಸ್ಥಿರವಾಗಿದ್ದವು ಎಂಬುದನ್ನು ಇಲ್ಲಿ ನೆನಪಿಡಬಹುದು. ರಾಜಕೀಯ ವಲಯಗಳಲ್ಲಿ ಕಾಣಿಸಿಕೊಂಡ ಕಲಹದ ಪರಿಣಾಮವಾಗಿ ಯಾವುದೇ ಒಂದು ರಾಜಕೀಯ ಪಕ್ಷ ಬಹುಮತವನ್ನು ಗಳಿಸಲಿಲ್ಲ ಎಂಬುವುದನ್ನು ರಿಷ್‌ಸ್ಟ್ಯಾಗ್‌ನಲ್ಲಿ ಪ್ರತಿಬಿಂಬಿಸಿತು. 14 ವರ್ಷಗಳ ಅವಧಿಯಲ್ಲಿ 21 ಸಚಿವ ಸಂಪುಟಗಳು ರಚನೆಯಾದವು.

ಎರಡನೇ ಮಹಾ ಯುದ್ಧದನಂತರ ಈ ತೊಂದರೆಯನ್ನು ಪರಿಹರಿಸುವುದರ ಸಲುವಾಗಿ ಪಶ್ಚಿಮ ಜರ್ಮನಿ ಕೈಗೊಂಡ ಯೋಜನಾ ಕ್ರಮವನ್ನು ಕುರಿತು ಪರಿಶೀಲಿಸುವುದು ಉಪಯುಕ್ತವೆಂದು ಕಾಣುತ್ತದೆ. ಪ್ರಜಾಸತ್ತಾತ್ಮಕ ಸಂಸದೀಯ ಸರಕಾರದ ವ್ಯವಸ್ಥೆ ಮತ್ತು ಸರಕಾರದ ಸ್ಥಿರತೆಯನ್ನು ಒಳಗೊಂಡ ಯೋಜನೆ ಇದಾಗಿರುತ್ತವೆ. ಆಡಳಿತದ ಕೆಳಮನೆ ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಮತವನ್ನು ಚಲಾಯಿಸಿದರೆ ಸಾಲದು. ಈ ಕೆಳಮನೆ ಯಾವ ಸರಕಾರದ ಚಾನ್ಸಲರ್ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಮತ ಚಲಾಯಿಸುವುದೋ, ಆ ಸ್ಥಾನಕ್ಕೆ ಮತ್ತೊಬ್ಬ ವ್ಯಕ್ತಿಯನ್ನು ತರಲೂ, ಸರಕಾರ ರಚಿಸಲೂ ಸಿದ್ಧವಿರಬೇಕು. ಈ ಪದ್ಧತಿಯ ಅನ್ವಯ ಒಬ್ಬ ನಾಯಕ (ಚಾನ್ಸಲರ್) ಆಯ್ಕೆಯಾದನೆಂದರೆ ಬಂಡೆಸ್ಟ್ಯಾಂಗ್ (ಸಂಯುಕ್ತ ವ್ಯವಸ್ಥೆ) ಯಿಂದ ನಿರ್ದಿಷ್ಟ ಅವಧಿಯಲ್ಲಿ ಆತನನ್ನು ತೆಗೆದು ಹಾಕುವಂತಿಲ್ಲ. ನಿಂದನೆಯ ಆಧಾರದ ಮೇಲೆ ಚಲಾಯಿಸಬಹುದಾದ ಮತದಿಂದಾಗಲಿ, ಅಥವ ಸಂಪುಟದ ಮೇಲಿನ ವಿಶ್ವಾಸದ ಬಗ್ಗೆ ಚಲಾಯಿಸಬಹುದಾದ ಮತಗಳಿಂದಾಗಲಿ, ಅಯಶಸ್ವಿಯಿಂದಾಗಲಿ, ಸಂಪುಟವನ್ನು ರಾಜಿನಾಮೆ ಸಲ್ಲಿಸುವಂತೆ ಮಾಡಲಾಗದು. ಬಂಡೇಸ್ಟ್ಯಾಂಗ್ ಚಾನ್ಸಲರ್ ಅನ್ನು ಆರಿಸಿದ ಮೇಲೆಯೆ ಹಿಂದಿನ ಮುಖ್ಯಸ್ಥನಿರ್ಗಮಿಸಬಹುದು. ಇದು ಕಷ್ಟಕರವಾದುದು ಯಾಕೆಂದರೆ ಸರಕಾರದ ವಿರುದ್ಧ ಒಮ್ಮುಖ ನಿಲುವುಗಳನ್ನು ತಳೆಯುವ ಪ್ರತಿಗಾಮಿ ಶಕ್ತಿಗಳು ಹಲವರು ಹೊರದೂಡಲ್ಪಡುವ ಬಗ್ಗೆ ಭಿನ್ನಾಭಿಪ್ರಾಯಗಳನ್ನು ಹೊಂದಿರುತ್ತಾರೆಯೇಹೊರತು ಅಧಿಕಾರಕ್ಕೆ ಬರುವ ಏಕಾಭಿಪ್ರಾಯ ಹೊಂದಿರುವುದಿಲ್ಲ.

ಜರ್ಮನ್ ರಾಷ್ಟ್ರದಲ್ಲಿ ಪರಿಹಾರದ ಸಲುವಾಗಿ ಅಳವಡಿಸಿದ ಕೆಲವು ಸೂತ್ರಗಳು ತೀವ್ರ ವಿಮರ್ಶೆಗೆ ಒಳಪಟ್ಟವು. ಎರಡನೆಯ ಮಹಾ ಯುದ್ಧದಿಂದ ಉಂಟಾಗಿದ್ದ ಅಶಾಂತಿಯ ಸಮಯದಲ್ಲೂವೇಮರ್ ಗಣರಾಜ್ಯದಂತೆ ಬಾನ್ ಆಡಳಿತವು ಎರಡನೆಯ ಮಹಾ ಯುದ್ಧದಭೀಕರತೆಯಿಂದ ಕೂಡಿದ್ದರೂ ಹೆಚ್ಚು ಸ್ಥಿರತೆಯಿಂದ ಕೂಡಿತ್ತು. ಎಂಬುದನ್ನು ನಾವು ಈ ಸಮಯದಲ್ಲಿ ನೆನಪಿಡಬೇಕು. ಪ್ರಥಮ ಅಧ್ಯಕ್ಷರಾದ ಶ್ರೀ ಕೊನಾರ್ಡ್ ಆಡಿನಾರ್‌ರವರ ಸರಳತೆ ಮತ್ತು ಅವರ ಭವ್ಯ ವ್ಯಕ್ತಿತ್ವದಿಂದ ಕೂಡಿದ ಪ್ರಭಾವ, ಬಾನ್ ಆಡಳಿತವು ದ್ವಿತೀಯ ಮಹಾ ಯುದ್ಧದ ನಂತರ ಆರಂಭದ ವರ್ಷಗಳಲ್ಲಿ ಸ್ಥಿರತೆಯಿಂದ ಕೂಡಿರಲು ಸಾಧ್ಯವಾಯಿತು. ಆದರೂ ಸಹ ಆ ಪದ್ಧತಿಗೆ ವೈಶಿಷ್ಟ್ಯಪೂರ್ಣವಾದ ಪ್ರಭಾವವಿತ್ತೆಂಬುವುದನ್ನು ಯಾರೂ ನಿರಾಕರಿಸುವಂತಿಲ್ಲ.

ಐದನೆಯ ಗಣರಾಜ್ಯದ ಅವಧಿಯಲ್ಲಿ ಫ್ರೆಂಚ್ ರಾಷ್ಟ್ರದಲ್ಲಿ 1958 ರಿಂದ ಈಚೆಗೆ ಅಧ್ಯಕ್ಷೀಯ ಪದ್ಧತಿಯಿಂದಾಗಿ ಉಂಟಾಗಿದ್ದ ಪ್ರಸಕ್ತ ಪರಿಸ್ಥಿತಿಯನ್ನು ನಾವೀಗ ನೋಡೋಣ. ಆರಂಭದಲ್ಲಿ ಅಧ್ಯಕ್ಷೀಯ ವ್ಯವಸ್ಥೆಯಲ್ಲಿ ಸೀಸರ್‌ತ್ವ ಇದನ್ನು ಪ್ರಾರಂಭದಲ್ಲಿ ಸ್ವಾಗತಿಸಲಿಲ್ಲ. ದ್ವಿತೀಯ ಫ್ರೆಂಚ್ ಗಣರಾಜ್ಯದ ಸಮಯದಲ್ಲಿ ರಾಜಕುಮಾರ ನಾದ ಲೂಯಿ ನೆಪೋಲಿಯನ್ ಅಧ್ಯಕ್ಷೀಯ ಸಂವಿಧಾನವನ್ನು ಬಳಸಿಕೊಂಡು ತೃತೀಯ ನೆಪೋಲಿಯನ್ ಆಗಲು ಪ್ರಯತ್ನಿಸಿದ. ಜನತೆ ಇದಕ್ಕಾಗಿ ಭಯಗೊಂಡಿತು ಮತ್ತು ಈ ಐತಿಹಾಸಿಕ ಅನುಭವದಿಂದಾಗಿ ಜನತೆ ಇಡೀ ಪದ್ಧತಿಯನ್ನು ಸ್ವಾಗತಿಸಲು ಸಿದ್ಧವಿರಲಿಲ್ಲ.

ಐದನೆಯ ಗಣರಾಜ್ಯದ ಆಡಳಿತದಲ್ಲಿ ಸಾಂಪ್ರದಾಯಕವಾಗಿ ಫ್ರೆಂಚ್‌ನ ಅಧ್ಯಕ್ಷರನ್ನು 7 ವರ್ಷಗಳಿಗೆ ಆಡಳಿತ ನಡೆಸಲು ಚುನಾಯಿಸಿದರು. ಇದಕ್ಕೆ ಪರ್ಯಾಯವಾಗಿ ಸಂಸತನ್ನು 5ವರ್ಷದ ಅವಧಿಗೆ ಚುನಾಯಿಸಲಾಯಿತು. ಅಧ್ಯಕ್ಷ, ಪ್ರಧಾನಮಂತ್ರಿಯನ್ನು ಆಯ್ಕೆ ಮಾಡುತ್ತಾರೆ ಮತ್ತು ನಿರ್ವಹಿಸುವ ಕಾರ್ಯದಿಂದ ತೆಗೆದು ಹಾಕಲು ಹಕ್ಕುಳ್ಳವರಾಗುತ್ತಾರೆ. ಪ್ರಧಾನಮಂತ್ರಿಯ ಅನುಮೋದನೆಯ ಮೇಲೆ ಸರ್ಕಾರದ ಇತರೆ ಮಂತ್ರಿಗಳನ್ನು ರಾಷ್ಟ್ರಪತಿಯವರು ಆಯ್ಕೆ ಮಾಡುತ್ತಾರೆ. ಸಚಿವ ಸಂಪುಟದ ಸಭೆ ಕಾರ್ಯಕಲಾಪಗಳಲ್ಲಿ ರಾಷ್ಟ್ರಪತಿಯವರು ಅಧ್ಯಕ್ಷತೆ ವಹಿಸುತ್ತಾರೆ. ಸಚಿವ ಸಂಪುಟದ ಸದಸ್ಯರಿಂದ ಮಂಡಿಸಬಹುದಾದ ಯಾವುದೇ ರೀತಿಯ ಮಸೂದೆಯನ್ನು ಅದು ಒಪ್ಪಿಗೆಯಾದ 15 ದಿನಗಳ ಒಳಗಾಗಿ ತನ್ನ ಒಪ್ಪಿಗೆಯನ್ನು ನೀಡಿ ಅದನ್ನು ಕಾನೂನು ಎಂದು ರಾಷ್ಟ್ರಪತಿಯವರು ಘೋಷಿಸಲೇ ಬೇಕಾಗುತ್ತದೆ. ಅವರು ಯಾವುದೇ ರೀತಿಯ ಮಸೂದೆಯನ್ನು ಮಂಡಿಸಿದಾಗ ತಮ್ಮ ಒಪ್ಪಿಗೆಯನ್ನು ನೀಡದೆ ಆ ಮಸೂದೆಯನ್ನು ಪುನರ್ ಪರಿಶೀಲನೆಗಾಗಿ ಸಂಸತ್ತಿಗೆ ಹಿಂದಿರುಗಿಸುವ ಹಕ್ಕುಳ್ಳವರಾಗಿರುತ್ತಾರೆ. ಈ ರೀತಿ ಕಳುಹಿಸಿದಾಗ ರಾಷ್ಟ್ರಪತಿಯವರ ಪ್ರಾರ್ಥನೆಯನ್ನು ಸಂಸತ್ತು ತಿರಸ್ಕರಿಸುವಂತಿಲ್ಲ. ಯಾವಾಗ ರಾಷ್ಟ್ರಪತಿಯವರು 15 ದಿನಗಳ ಒಳಗಾಗಿ ಮಸೂದೆಯನ್ನು ಮಂಡಿಸಿದ ನಂತರ ಕೋರಿಕೆಯನ್ನು ಮುಂದಿಡುವರೋ ಆಗ ಸಂಸತ್ತಿನ ಮೇಲೆ ರಾಜಕೀಯ ಒತ್ತಡಗಳನ್ನು ಸಹ ಅವರಿಗೆ ತರಲು ಅವಕಾಶವಿರುತ್ತದೆ.

ಫ್ರೆಂಚ್‌ನ ರಾಷ್ಟ್ರಪತಿಯು ರಾಷ್ಟ್ರೀಯ ಸಭೆಯನ್ನು ರದ್ದುಪಡಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಆದರೆ ಸಭೆಯು ರಚನೆಯಾದ ಒಂದು ವರ್ಷದ ಒಳಗೆ ಈ ರೀತಿಯ ತೀರ್ಮಾನ ಕೈಗೊಳ್ಳುವಂತಿಲ್ಲ. ರಾಷ್ಟ್ರೀಯ ಸಭೆಯನ್ನು ರದ್ದುಗೊಳಿಸುವ ಮೊದಲು ರಾಷ್ಟ್ರಪತಿಯವರು, ಪ್ರಧಾನಿಯನ್ನು ಮತ್ತು ಎರಡು ಸದನಗಳ ಸಭಾಧ್ಯಕ್ಷರನ್ನು ಭೇಟಿಯಾಗಿ ಒಪ್ಪಿಗೆ ಪಡೆಯಬೇಕಿರುತ್ತದೆ. ರಾಷ್ಟ್ರಪತಿಗಳು ಅವರ ಸಲಹೆಗಳನ್ನು ಪಡೆಯಬೇಕೆಂದಿಲ್ಲ ಮತ್ತು ಆ ರೀತಿಯ ಸಲಹೆಗಳನ್ನು ತಿರಸ್ಕರಿಸಲೂ ಬಹುದು. ರಾಷ್ಟ್ರಪತಿಯವರು ಪ್ರಧಾನಿಯನ್ನು ಆಯ್ಕೆ ಮಾಡುತ್ತಾರೆ. ಮತ್ತು ಆಯ್ಕೆಗೊಂಡ ಪ್ರಧಾನಿಯಿಂದ ಬರಬಹುದಾದ ಸಲಹೆಯ ಮೇಲೆಗೆ ಸಂಪುಟದ ಇತರ ಸದಸ್ಯರನ್ನು ನೇಮಿಸುತ್ತಾರೆ. ಸರ್ಕಾರವು ಸಂಸತ್ತಿಗೆ ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತವಾಗಿರುತ್ತದೆ ಮತ್ತು ಸರ್ಕಾರವನ್ನು ನಿಂದನೆಯ ಆಧಾರದ ಮೇಲಾಗಲಿ ಅಥವಾ ಅವಿಶ್ವಾಸ ನಿರ್ಣಯದ ಮೇಲಾಗಲಿ ಸಂಸತ್ತು ರದ್ದುಗೊಳಿಸಬಹುದು.

ಸಂಪುಟದ ಚರ್ಚೆಯನಂತರ ಪ್ರಧಾನಿಯವರು ಬಹುಮತಕ್ಕಾಗಿ ರಾಷ್ಟ್ರೀಯ ಸದನದಲ್ಲಿ ವಿಶ್ವಾಸ ಮತವನ್ನು ಪಡೆಯಲು ಯತ್ನಿಸಬಹುದು. ರಾಷ್ಟ್ರೀಯ ಸಭೆ ಪ್ರಧಾನಿಯ ಬೇಡಿಕೆಯನ್ನು ತಿರಸ್ಕರಿಸಿದ್ದೇ ಆದರೆ ಸರಕಾರ ರಾಜಿನಾಮೆ ನೀಡಬೇಕಾಗುತ್ತದೆ. ಅಷ್ಟೇ ಅಲ್ಲದೆ ನಿಂದನಾ ನಿರ್ಣಯದ ಆಧಾರದ ಮೇಲೆ ಮತ ಚಲಾಯಿಸಿ ಸರಕಾರವನ್ನು ಉರುಳಿಸಲು, ರಾಷ್ಟ್ರೀಯ ಸಭೆ ಕ್ರಮ ಕೈಗೊಳ್ಳಲೂ ಬಹುದು. ಆದರೆ ಇದು ಅಷ್ಟೊಂದು ಸುಲಭದಾಯಕವಾದುದಲ್ಲ. ಇದಕ್ಕೆ ಸಂಬಂಧಿಸಿದ ಹಾಗೆ ರಾಷ್ಟ್ರೀಯ ಸಭೆಯ ಸದಸ್ಯರ ಪೈಕಿ 1/10 ರಷ್ಟು ಸದಸ್ಯರು ಈ ರೀತಿಯ ಮಸೂದೆಗೆ ಸಹಿ ಮಾಡಬೇಕಿರುತ್ತದೆ. 48 ಗಂಟೆಗಳು ಕಳೆದ ಮೇಲೆಯೇ ಮತಕ್ಕೆ ಹಾಕುವುದು. ರಾಷ್ಟ್ರೀಯ ಸಭೆಯ ಸದಸ್ಯರ ಪೈಕಿ ಬಹುಜನ ಸದಸ್ಯರು ಹಾಜರಿದ್ದು ಮತ ಚಲಾಯಿಸಿದರೆ ಮಾತ್ರ ನಿಂದನಾ ಮಸೂದೆ ಅನುಮೋದನೆಯಾಯಿತು ಎಂದು ಪರಿಗಣಿಸಲಾಗುವುದು. ಇಲ್ಲದಿದ್ದರೆ ನಿಂದನಾ ಮಸೂದೆ ತಿರಸ್ಕರವಾಯಿತೆಂದೇ ಭಾವಿಸಲಾಗುವುದು. ನಿಂದನಾ ನಿರ್ಣಯ ತಿರಸ್ಕೃತವಾದರೆ ಸಹಿ ಮಾಡಿದ ಸದಸ್ಯರುಗಳು ಆ ಸಭೆಯ ಅವಧಿಯಲ್ಲಿ ಮತ್ತೊಂದು ನಿಂದನಾ ಮಸೂದೆಯನ್ನು ತರಲು ಸಾಧ್ಯವಿರುವುದಿಲ್ಲ. ಆದರೆ ಬೇರೆ ಸದಸ್ಯರುಗಳು ಸಹಿ ಮಾಡಿ ಇಂಥದ್ದೇ ಮಸೂದೆಯನ್ನು ಅದೇ ಸಭೆಯಲ್ಲಿ ತರಬಹುದು. ಇಲ್ಲಿ ಒಂದು ವ್ಯತ್ಯಯವನ್ನು ನಾವು ನೆನಪಿಡಬೇಕು.

(ಮುಂದುವರಿಯುತ್ತದೆ)

ತೋಟ ಕಾರ್ಮಿಕರ ಹೋರಾಟ

ಚಿಕ್ಕಮಗಳೂರು, ಹಾಸನ, ಕೊಡಗು ಮೊದಲಾದ ಬೆಟ್ಟ - ಕಾಡು ಪ್ರದೇಶದಲ್ಲಿರುವ ಕಾಫಿ ತೋಟಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಭದ್ರತೆ ಎಂಬುದೇ ಇಲ್ಲದಂತಾಗಿದೆ. ಸರಕಾರದ ಕಾಯಿದೆ-ಕಾನೂನುಗಳಿಂದ ಇವರಿಗೆ ಯಾವ ರಕ್ಷಣೆಯೂ ಇಲ್ಲ. ಆ ಪ್ರದೇಶದಲ್ಲೆಲ್ಲ ತೋಟ ಮಾಲಿಕರದ್ದೇ ಕಾರುಭಾರವಾಗಿದೆ. ಅಲ್ಲೆಲ್ಲಾ ಸಿಐಟಿಯು ಹೋರಾಟ ಮುಂದುವರಿಸಿದೆ.

ಮೂಡಿಗೆರೆ ತಾಲೂಕಿನ ಚಂದ್ರಾಪುರ ಎಸ್ಟೇಟಿನಲ್ಲಿರುವ ಸುಮಾರು 200 ಕಾರ್ಮಿಕರು ಸೆಪ್ಟೆಂಬರ್ 28 ರಿಂದ ಮುಷ್ಕರ ನಡೆಸಿದ್ದಾರೆ. ಯಾವ ಮುನ್ಸೂಚನೆಯೂ ಇಲ್ಲದೆ 22 ಕಾರ್ಮಿಕರನ್ನು ವಜಾ ಮಾಡಲಾಗಿದೆ. 4-5 ವರ್ಷಗಳಿಂದ ಕೆಲಸದಲ್ಲಿದ್ದವರನ್ನು ಖಾಯಂ ಮಾಡಿಲ್ಲ, ಹೆಚ್ಚಿನ ಬೋನಸ್ ಕೊಟ್ಟಿಲ್ಲ. ಆದ್ದರಿಂದ ಮುಷ್ಕರದ ಹಾದಿ ಹಿಡಿಯಲಾಗಿದೆ.

ಕಾರ್ಮಿಕ ತನಿಕಾಧಿಕಾರಿಗಳು ಕರೆದ ಸಭೆಯಲ್ಲಿ ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾದುದರಿಂದ ಅಕ್ಟೋಬರ್ ಒಂದರಿಂದ ಮುಷ್ಕರ ನಿಲ್ಲಿಸಲಾಯಿತು. ಒಪ್ಪಂದದ ಪ್ರಕಾರ 17-10-84 ರೊಳಗಾಗಿ ಒಂದು ಇತ್ಯರ್ಥಕ್ಕೆ ಬರಲು ಸಾಧ್ಯವಾಗದಿದ್ದರೆ ಎಲ್ಲಾ 22 ಕಾರ್ಮಿಕರಿಗೆ ಕೆಲಸ ಕೊಡುವುದಾಗಿ ಮಾಲಕರ ಒಪ್ಪಿಗೆ, ಮುಷ್ಕರದಲ್ಲಿ ಭಾಗವಹಿಸಿದ್ದ ಕಾರ್ಮಿಕರ ಮೇಲೆ ದ್ವೇಷ ಭಾವನೆಯಿಂದ ವರ್ತಿಸಬಾರದು. ಆದರೆ 1-10-84 ರಂದು ಸಂಧಾನಾಧಿಕಾರಿಯವರೆದುರು ಚರ್ಚೆ ನಡೆದಾಗ ಮಾಲಿಕರು ಮುಷ್ಕರಕ್ಕೆ ನೇತೃತ್ವ ನೀಡಿದ ಇಬ್ಬರು ಕಾರ್ಮಿಕರ ಮೇಲೆ ಸುಳ್ಳು ಆರೋಪ ಹೊರಿಸಿ ಅವರನ್ನು ಕೆಲಸದಿಂದ ತೆಗೆದು ಹಾಕುತ್ತೇನೆಂದೂ ಯಾವ ಕೋರ್ಟಿಗೆ ಹೋದರೂ ನೋಡಿಕೊಳ್ಳುತ್ತೇನೆಂದೂ ಉದ್ಧಟತನದಿಂದ ಮಾತಾಡಿ ಸೆಪ್ಟೆಂಬರ್ 30 ರಂದು ಸಾಧಿಸಿದ ಒಪ್ಪಂದವನ್ನು ಮುರಿದಿದ್ದಾರೆ. ಇವರ ವರ್ತನೆಯಿಂದ ಚಂದ್ರಾಪುರ ತೋಟದಲ್ಲಿ ಕೈಗಾರಿಕಾ ಶಾಂತಿ ನೆಲೆಸಲು ಮಾಲಕರು ಸಹಕರಿಸುತ್ತಿಲ್ಲೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ಕಾರ್ಮಿಕರ ಸಂಘಟನೆ, ಐಕ್ಯತೆಯನ್ನು ಬಲಗೊಳಿಸಿ ಇಂಥ ಬೆದರಿಕೆಗಳನ್ನೆದುರಿಸಲು, ನ್ಯಾಯ ಪಡೆಯಲು, ಹೋರಾಟ ಮುಂದುವರಿಸಲು ಕಾರ್ಮಿಕರು ತಯಾರಾಗಬೇಕೆಂದು ಕಾರ್ಮಿಕ ಸಂಘದ ಪದಾಧಿಕಾರಿಗಳಾದ ಎ. ಕೆ. ವಿಶ್ವನಾಥ, ಎ. ಸಿ. ಕೇಶವ ಮತ್ತು ಜಿ. ಎಸ್. ರಾಘವೇಂದ್ರ ಇವರು ಮನವಿ ಮಾಡಿಕೊಂಡಿದ್ದಾರೆ.

●

ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಕಾರ್ಯಕರ್ತರ ಮೇಲೆ ಸುಳ್ಳು ಮೊಕದ್ದಮೆಗಳು

ಬಳ್ಳಾರಿ ಜಿಲ್ಲೆಯಲ್ಲೇ ಅತ್ಯಂತ ಬಲಿಷ್ಠ ಪ್ರಜಾಸತ್ತಾತ್ಮಕ ಚಳುವಳಿಯನ್ನು ಸಂಘಟಿಸಿ ಮುನ್ನಡೆಸುವಲ್ಲಿ ಅತ್ಯಂತ ಯಶಸ್ವಿಯಾಗುತ್ತಿರುವ ಎಸ್ ಎಫ್. ಐ., ಡಿ.ವೈ.ಎಫ್.ಐ. ಸಂಘಟನೆಗಳ ಮೇಲೆ ಸರ್ವಾಧಿಕಾರಿ, ಕೋಮುವಾದೀ ಶಕ್ತಿಗಳು ತಮ್ಮ ಹೀನ ದಬ್ಬಾಳಿಕೆಯನ್ನು ಆರಂಭಿಸಿವೆ.

ಆದರಂತೆ ಹೊಸ ಪೇಟೆಯಲ್ಲಿ ಇದರ ತೀವ್ರತರದ ದಬ್ಬಾಳಿಕೆ ಆರಂಭವಾಗಿದೆ. ಪ್ರಜಾಸತ್ತಾತ್ಮಕ ಚಳುವಳಿಯ ಬದ್ಧ ದ್ವೇಷಿ ವಿಜಯ ನಗರ ಕಾಲೇಜಿನ ಪ್ರಿನ್ಸಿಪಾಲ ಚಂದ್ರಶೇಕರಪ್ಪ ಹಾಗೂ ಪೋಲೀಸರು; ಮತ್ತು ಇತರ ಅಧಿಕಾರಶಾಹೀ, ಸರ್ವಾಧಿಕಾರೀ ಕಾಂಗ್ರೆಗಳೊಂದಿಗೆ ಶಾಮೀಲಾಗಿ ಎಸ್.ಎಫ್.ಐ ಡಿ. ವೈ. ಎಫ್. ಐ. ನ 16 ಕಾರ್ಯಕರ್ತರುಗಳ ಮೇಲೆ ಶಿಸ್ತುಮತ್ತುಶಾಂತಿ, ಉಲ್ಲಂಘನೆಯ ಆರೋಪ ಹೊರಿಸಿ ಸುಳ್ಳುಮೊಕದ್ದಮೆ ಹಾಕಿದ್ದಾರೆ.

ಅಲ್ಲದೇ ಎಸ್. ಎಫ್. ಐ. ನ ಜಿಲ್ಲಾ ಸಮಿತಿ ಕಾರ್ಯದರ್ಶಿ, ರಾಜ್ಯ ಉಪಾಧ್ಯಕ್ಷ ಕಾಂ|| ಗುರುಶಾಂತ್, ಜಿಲ್ಲಾ ಸಮಿತಿ ಸದಸ್ಯ, ಕಾ|| ರಾಮನಾಥ್ ಹಾಗೂ ಡಿ. ವೈ. ಎಫ್. ಐ. ಜಿಲ್ಲಾ ಸಂಚಾಲಕರಾಗಿರುವ ಕಾಂ|| ಜಂಬಯ್ಯ ನಾಯಕರ ಮೇಲೆ 504, 506, ಐ.ಪಿ ಸಿ. ಸುಳ್ಳು ಮೊಕದ್ದಮೆಗಳನ್ನು ಹೂಡಿದ್ದಾರೆ. ಅಲ್ಲದೇ ಡಿ. ವೈ. ಎಫ್. ಐ.ನ ಕಾಂ|| ಜಂಬಯ್ಯ ನಾಯಕ್, ಕಾಂ|| ತಾಯಪ್ಪ ನಾಯಕ ಇವರುಗಳನ್ನು ಸ್ವೈಫಂಡರಿ ನೌಕರಿಯಿಂದ ಅಕ್ರಮವಾಗಿ ಜಿಲ್ಲಾಧಿಕಾರಿಗಳು ವಜಾ ಮಾಡಿದ್ದಾರೆ.

ಈ ಬಗ್ಗೆ ಎಸ್. ಎಫ್. ಐ., ಡಿ. ವೈ. ಎಫ್. ಐ. ಸಂಘಟನೆಗಳು ಸಂಬಂಧಿಸಿದ ಅಧಿಕಾರಿಗಳಿಗೂ, ರಾಜ್ಯದ ಸಾರಿಗೆ, ಕಾರ್ಮಿಕ ಮಂತ್ರಿ ಎಂ. ಪಿ. ಪ್ರಕಾಶ್ ಅವರಿಗೂ ಮನವಿಗಳನ್ನು ಸಲ್ಲಿಸಿ ನ್ಯಾಯ ಕೇಳಲಾಗಿದೆ. ಸೆ. 15 ರಂದು ಜಿಲ್ಲೆಯಲ್ಲಿ ಈ ಬೇಡಿಕೆಯೂ ಪ್ರಮುಖವಾಗಿತ್ತು. ಆದರೆ ಇದುವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಎಂ. ಪಿ. ಪ್ರಕಾಶರದು ಭರವಸೆ ಮಾತ್ರ ದೊರಕಿದೆ.

ಇಂತಹ ಧಾಳಿ ದಬ್ಬಾಳಿಕೆಗಳನ್ನು ದಿಟ್ಟವಾಗಿ ಎದುರಿಸಲು ಎಸ್ ಎಫ್ ಐ ಡಿ. ವೈ. ಎಫ್. ಐ. ಸಂಘಟನೆಗಳು ತೀವ್ರತರ ಕಾರ್ಯಕ್ರಮ ಹಾಕಿಕೊಳ್ಳುತ್ತಿವೆ. ಇಂತಹ ಗೊಡ್ಡು ಬೆದರಿಕೆ, ದಬ್ಬಾಳಿಕೆಗೆ ಪ್ರಜಾಸತ್ತಾತ್ಮಕ ಶಕ್ತಿಗಳು ಹೆದರುವುದಿಲ್ಲವೆಂದು ಎಚ್ಚರಿಕೆ ನೀಡಿವೆ. ಕೂಡಲೇ ಇದು ನಿಲ್ಲಲೆಂದು ಒತ್ತಾಯಿಸಿವೆ.

ಯೂರೋಪ್ ಬೃಹತ್ "ಗ್ಯಾಸ್ ಚೇಂಬರ್" ಆಗಲಿದೆಯೇ?

ಸಮಗ್ರ ಯೂರೋಪ್ ಬೃಹತ್ "ಗ್ಯಾಸ್ ಚೇಬಂರ್" ಆಗಿ ಪರಿವರ್ತಿತವಾಗುವ ಸಾಧ್ಯತೆ ಇದೆ ಎಂದು ತಾಸ್ ಮಿಲಿಟರಿ ಸುದ್ದಿ ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ. ಅಮೆರಿಕಾ ಮತ್ತು ಬ್ರಿಟನ್, ಪಶ್ಚಿಮ ಯೂರೋಪಿನ ತಮ್ಮ ಮಿತ್ರ ರಾಷ್ಟ್ರಗಳ ಪ್ರದೇಶಗಳಲ್ಲಿ ರಾಸಾಯನಿಕ ಆಯುಧಗಳ ಶಸ್ತ್ರಾಗಾರಗಳನ್ನು ಹೆಚ್ಚಿಸಲು ಹಾಕಿಕೊಂಡಿರುವ ಹಂಚಿಕೆಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ಗಮನಿಸಿ ತಾಸ್ ಸುದ್ಧಿ ವಿಶ್ಲೇಷಕರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಜರ್ಮನಿಯ ಪರ್ವತ ಪ್ರದೇಶಗಳಲ್ಲಿ ರಾಸಾಯನಿಕ ಜೈವರಿಶಸ್ತ್ರಾಸ್ತ್ರಗಳ ನರಗಳ ಶಕ್ತಿಯನ್ನು ಉಡುಗಿಸುವ ವಿಷಾನಿಲ ಅಸ್ತ್ರಗಳ ಐದು ಶಸ್ತ್ರಾಗಾರಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಪಶ್ಚಿಮ ಜರ್ಮನಿಯಲ್ಲಿ ಈಗಾಗಲೇ ಸರಿನ್ ಮತ್ತು ವಿ-ಎಕ್ಸ್ ಎಂಬ ರಾಸಾಯನಿಕಗಳು ನಾಲ್ಕು ಮಿಲಿಯ ಲೀಟರ್‌ಗಳಷ್ಟು ಸಂಗ್ರಹವಾಗಿವೆ.

ಮುಂದಿನ ಐದು ವರ್ಷಗಳ ಅವಧಿಯಲ್ಲಿ ಸುಮಾರು 5 ಮಿಲಿಯದಷ್ಟು ರಾಸಾಯನಿಕ ಆಯುಧಗಳನ್ನು ಜಮಾಯಿಸಿಡಲು ವಾಷಿಂಗ್ಟನ್ ಆಡಳಿತ ನಿರ್ಧರಿಸಿದೆ. ಅದು ಪಶ್ಚಿಮ ಜರ್ಮನಿ ಹಾಗೂ ಯೂರೋಪಿನಲ್ಲಿರುವ ನ್ಯಾಟೋದ ಸದಸ್ಯರಾಷ್ಟ್ರಗಳ ಬದುಕು ಪರಿಸರವನ್ನು ಸಂಪೂರ್ಣವಾಗಿ ಕೆಡಿಸುವ ತೀವ್ರ ಬೆದರಿಕೆಯೊಡ್ಡಿದೆ ಎಂದು ತಾಸ್ ಸುದ್ದಿ ವಿಶ್ಲೇಷಕರು ಬರೆದಿದ್ದಾರೆ.

ವಾಷಿಂಗ್ಟನ್ ಆಡಳಿತದ ದುಷ್ಟ ಹಂಚಿಕೆಗಳನ್ನು ಹತ್ತಿಕ್ಕಲು ಹಾಗೂ ರಾಸಾಯನಿಕ ಅಸ್ತ್ರಗಳ ಉತ್ಪಾದನೆ, ಪರೀಕ್ಷೆ ಮತ್ತು ಜಮಾಪಣೆಯ ಸಂಪೂರ್ಣ ನಿಷೇಧಕ್ಕೆ ಜಗತ್ತಿನ ಎಲ್ಲ ವಿವೇಕಯುತ ಮಂದಿ ಶ್ರಮಿಸಬೇಕು ಎಂದೂ ತಾಸ್ ಸುದ್ದಿ ವಿಶ್ಲೇಷಕರು ಒತ್ತಿ ಹೇಳಿದ್ದಾರೆ.

ಸಾರ್ವಜನಿಕ ಕುಂದು ಕೊರತೆಗಳ ನಿವಾರಣೆಗೆ ಮನವಿ

7-10-84ರ ಸಂಜೆ ಚಾಮರಾಜಪೇಟೆಯಲ್ಲಿ ನಡೆದ ಉದಯ ಭಾನು ಕಲಾ ಸಂಘದ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸಿದ್ದ ನಗರಾಭಿವೃದ್ಧಿ ಸಚಿವರಾದ ಶ್ರೀ ವಿ. ಎಸ್. ಕೃಷ್ಣಯ್ಯರ್, ಲೋಕೋಪಯೋಗಿ ಸಚಿವರಾದ ಶ್ರೀ ಚಂದ್ರಶೇಖರ್ ಹಾಗೂ ಪುರಸಭಾ ಸದಸ್ಯರಾದ ಶ್ರೀ ಕೆ. ನಾರಾಯಣ ಸ್ವಾಮಿ ಅವರುಗಳಿಗೆ ಡಿ. ವೈ. ಎಫ್. ಐ. ಚಾಮರಾಜಪೇಟೆ ಘಟಕದ ಸುಮಾರು 40 ಜನ ಸದಸ್ಯರುಗಳು ಜಿಲ್ಲಾ ಸಂಚಾಲಕ ಕಾ. ಟಿ. ಶಿವಶಂಕರ್ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಆ ಪ್ರದೇಶದ ಆಟದ ಮೈದಾನವನ್ನು ಮಾರಾಟ ಮಾಡದಂತೆಯೂ, ಮ್ಯಾನ್ ಹೋಲ್‌ಗಳನ್ನು ಮುಚ್ಚುವಂತೆಯೂ, ಮೋರಿಯನ್ನು ರಿಪೇರಿ ಮಾಡುವಂತೆಯೂ, ಪ್ರಾಥಮಿಕ ಶಾಲೆಯ ಪಕ್ಕದಲ್ಲಿನ ಹೆಂಡದ ಅಂಗಡಿಯನ್ನು ಎತ್ತಂಗಡಿ ಮಾಡುವಂತೆ ಕೇಳಿಕೊಳ್ಳಲಾಯಿತು.

ಮನವಿಯನ್ನು ಸ್ವೀಕರಿಸಿದ ಸಚಿವರುಗಳು ಶೀಘ್ರ ಪರಿಹಾರಕ್ಕೆ ಭರವಸೆ ನೀಡಿದರಾದರೂ ಮಾಜಿ ಪುರಸಭಾ ಸದಸ್ಯರಾದ ಶ್ರೀ ತಿಮ್ಮಯ್ಯ ಅವರು ಮನವಿಯ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಪ್ರಜಾಸತ್ತಾತ್ಮಕ ಚಳುವಳಿಗಳು ಬೆಳೆಯ ಬಾರದೆಂದೂ, ಅದು ಬೇಕಿಲ್ಲವೆಂಬಂತೆ ಅಸ್ಪಷ್ಟವಾಗಿ ಮಾತನಾಡಿದರು. ಮನವಿಯನ್ನು ಮೈಕಿನಲ್ಲಿ ಸಾರ್ವಜನಿಕರೆದುರು ಓದಲಾಯಿತು. ಆಟದ ಮೈದಾನ ಸ್ಥಳಗಳ ಮಾರಾಟ ಮಾಡಬಾರದೆಂದು ಕಾರ್ಪೊರೇಶನಿಗೆ ಆದೇಶ ನೀಡಲಾಗಿದೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದು ಡಿ.ವೈ. ಎಫ್. ಐ. ಗೆ ದೊರೆತ ಜಯವಾಗಿ ಸಾರ್ವಜನಿಕ ಸಮಸ್ಯೆಗಳ ನಿವಾರಣೆಗೆ ಇಂಥ ಸಂಘಟನೆಗಳು ಹೆಚ್ಚಾಗಿ ದುಡಿಯಬೇಕು.

ಚಿಕ್ಕಬಳ್ಳಾಪುರದಲ್ಲಿ ರೈತರ ಸಭೆ

ರೈತ ಬೇಡಿಕೆಗಳ "ವಾರಚರಣೆ" ಅಂಗವಾಗಿ ತಾ|| 29-9-84 ರಂದು ಚಿಕ್ಕಬಳ್ಳಾಪುರದ ತಾಲ್ಲೂಕು ರೈತ ಸಂಘದ ಆಶ್ರಯದಲ್ಲಿ ಸಭೆ ಸೇರಿ ರೈತ ಸಂಘದ ಸದಸ್ಯರನ್ನೊಳಗೊಂಡು ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಕಾ|| ಎಸ್. ಲಕ್ಷ್ಮಯ್ಯನವರ ಮತ್ತು ರೈತ ಸಂಘದ ಅಧ್ಯಕ್ಷರಾದ ಕಾ|| ಕೆ. ಎಂ. ಮುನಿಶಾಮಯ್ಯನವರ ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಅಸ್ಟಿಂಟ್ ಕಮೀಷನರ್‌ರವರಿಗೆ 12 ಬೇಡಿಕೆಗಳ ಮನವಿಯನ್ನು ಅರ್ಪಿಸಲಾಯಿತು.

ಮತ್ತು ತಾಲ್ಲೂಕಿನ ಅಭಾವ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸವನ್ನೂ ಒದಗಿಸಬೇಕೆಂತಲೂ, ದನಗಳಿಗೆ ಮೇವುಗಳನ್ನು ಒದಗಿಸಬೇಕೆಂತಲೂ ಹಳ್ಳಿಗಳಲ್ಲಿ ಅಗತ್ಯ ವಸ್ತುಗಳನ್ನೂ ಸಕ್ರಮವಾಗಿ ಹಂಚ ಬೇಕೆಂತಲೂ ಎಷ್ಟೋ ವರ್ಷಗಳಿಂದ ಹಳ್ಳಿಗಳಿಗೆ ದಾರಿಯ ಸಂಪರ್ಕಗಳಿಲ್ಲದೇ ಇರುವ ಕಡೆ ರಸ್ತೆಗಳನ್ನು ಮಾಡುವಂತೆಯೂ, 4-5 ವರ್ಷಗಳಾದರೂ ದರಖಾಸ್ತುದಾರರಿಗೆ ಮತ್ತು ಬಗುರುಕುಂ ಸಾಗುವಳಿ ಮಾಡುತ್ತಿರುವ ಬಡ ರೈತರಿಗೆ ಪಟ್ಟಾಗಳು ಕೊಡುವಂತೆಯೂ ಒತ್ತಾಯಿಸಲಾಗಿದೆ.

ತಹಸಿಲ್ದಾರ್, ಕ್ಷೇತ್ರಾಭಿವೃದ್ಧಿ ಅಧಿಕಾರಿ, ಶಾಸಕರನ್ನು ನೋಡಿ ಅವರಿಗೂ ಸಹಾ ಮನವಿಯನ್ನು ಅರ್ಪಿಸಲಾಯಿತು.

(2ನೇ ಪುಟದಿಂದ)

ಗಿದೆ. ಈ ಹೋರಾಟದ ಭಾಗವಾಗಿಯೇ ಸಾಮ್ರಾಜ್ಯಶಾಹಿ ಮಿಲಿಟರಿ ಆರ್ಥಿಕ ನೀತಿಯ ವಿರುದ್ದ ಜಾಗತಿಕ ಶಾಂತಿ ಮತ್ತು ರಾಷ್ಟ್ರದ ಸಮಗ್ರತೆಯನ್ನು ರಕ್ಷಿಸಲು ಜನತೆಯನ್ನು ತೊಡಗಿಸಬೇಕಾಗಿದೆ. ಈ ನಿಟ್ಟಿನಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಕಾಂಗ್ರೆಸ್ (ಐ) ಸರ್ಕಾರದ ಬಂಡವಾಳಶಾಹಿ ಆರ್ಥಿಕ ನೀತಿಗೆ ಬದಲಾಗಿ ತತ್ಕಾಲಿಕವಾಗಿ ಕನಿಷ್ಟ ಕಾರ್ಯಕ್ರಮ ಆಧಾರಿತ ಎಡ—ಪ್ರಜಾಪ್ರಭುತ್ವ ಪರ್ಯಾಯವನ್ನೂ ಜನತೆಯ ಮುಂದಿಟ್ಟಿದೆ. ಈ ಗುರಿ ಸಾಧನೆಗಾಗಿ ಜನತೆಯ ಹೋರಾಟವನ್ನು ಬಲಪಡಿಸಲು ಪ್ರಜಾಪ್ರಭುತ್ವ ವ್ಯವಸ್ಥೆಯ ರಕ್ಷಣೆಗಾಗಿ ಸರ್ವಾಧಿಕಾರಿ ವಿರೋಧಿ ವಿಶಾಲ ವೇದಿಕೆಯ ನಿರ್ಮಾಣದಲ್ಲಿ ತೊಡಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ರೈತ ಸಮುದಾಯದಲ್ಲಿ ಇದೀಗ ಎಚ್ಚರಗೊಳ್ಳುತ್ತಿರುವ ಜಾಗೃತಿಯು ಸ್ವಾಗತಾರ್ಹವಾಗಿದ್ದು ಈ ಜನಶಕ್ತಿಯನ್ನು ತಪ್ಪುದಾರಿಗೆಳೆಯಲು ಪ್ರಯತ್ನಿಸುತ್ತಿರುವ ದಿವಾಳಿಕೋರ ರಾಜಕಾರಣ ನೀತಿಯ ವಿರುದ್ಧ ಸೈದ್ಧಾಂತಿಕ ಸಂಘರ್ಷವನ್ನು ಕೊಂಡೊಯ್ಯಬೇಕಾಗಿದೆ.

●

ದ. ಕ. ಜಿಲ್ಲೆಯಲ್ಲಿ ಸಿ. ಪಿ. ಐ. [ಎಂ] ನ ಪ್ರಚಾರ ಸಭೆಗಳು

ಇಂದಿನ ಪ್ರಚಲಿತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಸಮಿತಿಯು ಜಿಲ್ಲೆಯಾದ್ಯಂತ ಪ್ರಚಾರ ಸಭೆ ಜಾಥಾ, ಮತ್ತು ಕರಪತ್ರ ಹಂಚುವುದರ ಮೂಲಕ ಜನಜಾಗೃತಿಗೊಳಿಸುವ ಕಾರ್ಯಕ್ರಮವನ್ನು ವಿಶಾಲ ರೀತಿಯಲ್ಲಿ ಹಾಕಿದ್ದು, ಇದು ಸೆಪ್ಟೆಂಬರ್ ತಾ|| 20 ರಿಂದ 30 ರ ತನಕ ನಡೆಯಿತು.

ಪ್ರಜಾಪ್ರಭುತ್ವದ ರಕ್ಷಣೆಗಾಗಿ ಜನತೆಯನ್ನು ಅಣಿನೆರೆಸಲು ಹಾಕಿದ ಈ ಕಾರ್ಯಕ್ರಮದಂತೆ ಕೇಂದ್ರ ಸರಕಾರದ ಜನವಿರೋಧಿ ಧೋರಣೆಯಿಂದಾಗಿ ಅದು ಜನತೆಯ ತಿರಸ್ಕಾರಕ್ಕೆ ಗುರಿಯಾಗುತ್ತಿದ್ದು ಏಕಪಕ್ಷದ ಏಕವ್ಯಕ್ತಿಯ ಮತ್ತು ವಂಶಪಾರಂಪರ್ಯದ ಅಧಿಕಾರವನ್ನು ನಿರಂತರವಾಗಿ ಮುಂದುವರಿಸಲು ಹತಾಶ ಪ್ರಯತ್ನಗಳ ಅಂಗವಾಗಿ ಇಂದಿರಾ ಸರಕಾರವು ಪ್ರಜಾಪ್ರಭುತ್ವದ ವ್ಯವಸ್ಥೆಯ ಮೇಲೆ ಇಂದು ನಡೆಸುತ್ತಿರುವ ಆಕ್ರಮಣವನ್ನು ಪ್ರತಿಭಟಿಸಲು ಜನತೆ ಮುಂದೆ ಬರುತ್ತಿರುವುದು ಸ್ವಾಗತಾರ್ಹವೆಂದೂ, ಸರ್ವಾಧಿಕಾರಿ ಶಕ್ತಿಗಳನ್ನೂ ಛಿದ್ರಕಾರಿ ಮತ್ತು ಮತೀಯ ಶಕ್ತಿಗಳನ್ನೂ ಸೋಲಿಸಲು ಜನತೆ ಒಗ್ಗಟ್ಟಾಗಿ ಹೋರಾಡಬೇಕೆಂದೂ ಜನತೆಗೆ ಕರೆಯಿತ್ತು ಕುಂದಾಪುರ, ತೊಕ್ಕೊಟ್ಟು ಉಡುಪಿ, ಬಂಟ್ವಾಳ ಮೊದಲಾದ ಕಡೆಗಳಲ್ಲಿ ಜರಗಿದ ಭಾರೀ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಶಾಸಕರಾದ ಕಾ|| ಪಿ. ರಾಮಚಂದ್ರರಾವ್ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ|| ಕೆ. ಆರ್. ಶ್ರೀಯಾನ್‌ರೂ ಭಾಷಣ ಮಾಡುತ್ತಾ ಹೇಳಿದರು.

ಸಭಾ ಪೂರ್ವದಲ್ಲಿ ಭಾರೀ ಮೆರವಣಿಗೆ ತೆಗೆಯಲಾಗಿದ್ದು ತಾ. 24 ರಂದು ಕುಂದಾಪುರದಲ್ಲೂ, ತಾ. 25 ರಂದು ತೊಕ್ಕೊಟ್ಟಿನಲ್ಲೂ, ತಾ. 27 ರಂದು ಉಡುಪಿಯಲ್ಲೂ, ತಾ. 28 ರಂದು ಬಂಟ್ವಾಳದಲ್ಲೂ ಸಭೆಗಳು ಜರಗಿದುವು. ಈ ಸಭೆಗಳಲ್ಲಿ ಮೇಲಿನ ಭಾಷಣಗಾರರಲ್ಲದೆ ಅಬ್ರಹಾಂ ಕರ್ಕಡ, ಕೆ. ಶಂಕರ, ಸಿ. ನಾರಾಯಣ, ಯು. ಜನಾರ್ದನ ನ್ಯಾಕ್, ಯು. ಬಿ. ಲೋಕಯ್ಯ, ಕಾಳಪ್ಪ ಶೆಟ್ಟಿ, ಡೇವಿಡ್ ಕರ್ಕಡ, ರಾಮ ಕುಂದರ್ ಹೂವಯ್ಯ ಬಂಗೇರ ಮತ್ತು ಬಿ. ವಾಸುಗಟ್ಟಿ ಮೊದಲಾದವರು ಮಾತನಾಡಿದ್ದಾರೆ.

ಪೋಲೀಸರಿಂದ ಹಲ್ಲೆ ತನಿಖೆಗೆ ಆಗ್ರಹ

ಸೆ. 30 ರಂದು ಮಂಗಳೂರು ಸರ್ವಿಸ್ ಬಸ್ ಸ್ಟ್ಯಾಂಡಿನಲ್ಲಿ ಟಿಕೇಟ್ ಬುಕ್ಕಿಂಗ್ ಏಜೆಂಟರು ಹಾಗೂ ಕಂಡಕ್ಟರೊಬ್ಬರನ್ನು ಪೋಲಿಸರು ಬಂಧಿಸಿ, ಅಮಾನುಷ ರೀತಿಯಲ್ಲಿ ಥಳಿಸಿ, ಜಖಂಗೊಳಿಸಿರುವುದನ್ನು, ಹಾಗೂ ಪೋಲಿಸರ ಪೈಶಾಚಿಕ ಕೃತ್ಯವನ್ನು ಮೋಟರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.) ನ ಪ್ರಧಾನ ಕಾರ್ಯದರ್ಶಿ ಖಂಡಿಸಿದ್ದಾರೆ.

ಸೆ. 29 ರಂದು ಬಸ್ ನಿಲ್ದಾಣದಲ್ಲಿ ಪುಡಿಕೇಡಿಯವನೆನ್ನಲಾದ ವ್ಯಕ್ತಿಯೋರ್ವ ಹುಡುಗಿಯರನ್ನು ಚುಡಾಯಿಸುವುದೇ ಇತ್ಯಾದಿ ಕೃತ್ಯಗಳಲ್ಲಿ ತೊಡಗಿದ್ದಾಗ ಏಜೆಂಟರು ಅದನ್ನು ಪ್ರತಿಭಟಿಸಿ, ಆತನನ್ನು ಪೋಲೀಸರಿಗೆ ಒಪ್ಪಿಸಿದರು. ಪೋಲೀಸರು ಅಪ್ರಾದಿತನ ಮೇಲೆ ಕ್ರಮ ಕೈಗೊಳ್ಳುವ ಬದಲಾಗಿ, ಬಸ್ಸ್ಟ್ಯಾಂಡಿಗೆ ಹಠಾತ್ ದಾಳಿ ನಡೆಸಿ, ಕರ್ತವ್ಯ ನಿರತರಾಗಿರುವ ಏಜಂಟರುಗಳನ್ನು ಸ್ಟೇಶನಿಗೆ ಎಳೆದೊಯ್ದು ತೀವ್ರವಾಗಿ ಥಳಿಸಿ ಗಾಯಗೊಳಿಸಿದರು. ಬಂದರು ಪೋಲಿಸ್ ಸ್ಟೇಶನಿನ ಸಬ್ ಇನ್ಸ್‌ಪೆಕ್ಟರರ ನಿರ್ದೇಶನದ ಮೇಲೆಯೇ ಈ ಕೃತ್ಯಗಳು ನಡೆದಿದ್ದವು. ಇದನ್ನು ಪ್ರತಿಭಟಿಸಿ 30-9-84 ರಂದು ಕೆಲವು ಗಂಟೆಗಳ ಕಾಲ ಸರ್ವಿಸ್ ಬಸ್ ಸಿಬ್ಬಂದಿಗಳು ಮುಷ್ಕರ ನಡೆಸಿದರು.

ಈ ಘಟನೆಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಮತ್ತು ತಪ್ಪಿತಸ್ಥ ಪೋಲೀಸರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರಿಗೆ ಮಂತ್ರಿಯವರಿಗೆ, ಹಾಗೂ ಮುಖ್ಯಮಂತ್ರಿಯವರಿಗೆ ತುರ್ತು ಮನವಿಯನ್ನು ಸಲ್ಲಿಸಲಾಗಿದೆಯೆಂದು ಯೂನಿಯನಿನ ಪ್ರಕಟನೆ ತಿಳಿಸಿದೆ.

ಮಂಗಳೂರು : ಸಹಕಾರಿ ಸಂಘದ ಮಹಾಸಭೆ

ಕೆನರಾ ವರ್ಕ್‌ಶಾಪ್ ಕೆಲಸಗಾರರ ಸಹಕಾರಿ ಸಂಘ ಮರೋಳಿ, ಇದರ 25 ನೇ ವಾರ್ಷಿಕ ಮಹಾಸಭೆಯು ಕೆನರಾ ಲೈಬ್ರೆರಿ ಸದನದಲ್ಲಿ ಸಂಘದ ಎಕ್ಸ್ ಅಫೀಶಿಯೋ ಪ್ರೆಸಿಡೆಂಟ್ ಹಾಗೂ ಸಂಘದ ಮೇನೇಜಿಂಗ್ ಡೈರೆಕ್ಟರ್‌ರವರಾದ ಶ್ರೀ ಎಸ್. ವಿ. ಕುಡ್ವ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಉಪಾಧ್ಯಕ್ಷರಾದ ಶ್ರೀ ಶಂಕರ ತದ್ರಿ ಅವರು ಸಭೆಗೆ ಸ್ವಾಗತ ಬಯಸಿದರು. ಕಾರ್ಯದರ್ಶಿ ಕೆ. ಬಾಲಕೃಷ್ಣ ಶೆಟ್ಟಿ ಅವರು ವರದಿ ಓದಿದರು. ಆಡಿಟ್ ರಿಪೋರ್ಟ್ ಹಾಗೂ 84-85 ರ ಬಜೆಟ್ ಮಂಡಿಸಿಯೊಂದಿಗೆ ಸರ್ವ ಸದಸ್ಯರಿಗೆ ಶೇ. 10/- ರ ದರದಲ್ಲಿ ಪಾಲು ಮುನಾಫೆಯನ್ನು ಮಂಜೂರು ಮಾಡಲಾಯಿತು. ಅಧ್ಯಕ್ಷರು ಸಂಘದ 25 ವರ್ಷಗಳ ಪ್ರಗತಿ ಹಾಗೂ ಅಭಿವೃದ್ಧಿಯನ್ನು ಶ್ಲಾಘಿಸಿ ಸಂಸ್ಥೆಗೆ ಶುಭಕೋರಿ ಮಾತನಾಡಿದರು.

ಆನಂತರ ಶ್ರೀ ಕೆ. ಸದಾನಂದ ಅವರ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿಯ ಪ್ರಥಮ ಸಭೆಯಲ್ಲಿ 1984-85 ರ ಸಾಲಿಗೆ ಎಸ್. ವಿ. ಕುಡ್ವಾ (ಎಕ್ಸ್‌ಓಫಿಸಿಯೋ ಪ್ರೆಸಿಡೆಂಟ್) ಯಂ. ಸೋಮಶೇಖರ (ಉಪಾಧ್ಯಕ್ಷ) ಶ್ರೀ ಬಾಲಕೃಷ್ಣ ಶೆಟ್ಟಿ (ಕಾರ್ಯದರ್ಶಿ) ಶ್ರೀ ಬಿ. ಬಾಬು (ಉಪಕಾರ್ಯದರ್ಶಿ) ಆರಿಸಲ್ಪಟ್ಟರು.

ಕೊನೆಗೆ ಸಿ. ನಾರಾಯಣರವರು ಧನ್ಯವಾದ ಅರ್ಪಿಸಿದರು.

ಬೀಡಿ ಕಾರ್ಮಿಕರ ಹೋರಾಟ

ಅನೇಕ ಸಂಕಷ್ಟಗಳ ನಡುವೆ ನರಳುತ್ತಿರುವ ಬೀಡಿ ಕಾರ್ಮಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಹೋರಾಟದ ಮಾರ್ಗ ಅನಿವಾರ್ಯವೆಂದು ನಿರ್ಧರಿಸಿದ್ದಾರೆ. ಇತ್ತೀಚೆಗೆ, ಇಲ್ಲಿ ಸಭೆ ಸೇರಿದ್ದ ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಮತ್ತು ಕಾರ್ಯಕರ್ತರ ಸಭೆಯಲ್ಲಿ ಕೂಲಂಕಶವಾಗಿ ಚರ್ಚಿಸಿ ಈ ಕಾರ್ಯಕ್ರಮ ರೂಪಿಸಲಾಗಿದೆ.

ಬೀಡಿ ಮಜೂರರಿಗೆ ಶೇಕಡಾ 20 ಬೋನಸ್ಸು ದೊರೆಯಬೇಕು. ಈ ಕಾರ್ಮಿಕರಿಗೆ ಮಂಗಳೂರಿನಲ್ಲಿ ಆಸ್ಪತ್ರೆಯೊಂದನ್ನು ತೆರೆಯಬೇಕು, ಬೀಡಿ ಕಾರ್ಮಿಕರ ಮಕ್ಕಳಿಗೆ ಅರ್ಜಿ ಹಾಕಿದ ಎಲ್ಲರಿಗೂ ಸ್ಕಾಲರ್‌ಶಿಫ್ ದೊರೆಯಲೇಬೇಕು. ಅಲ್ಲದೆ ಬೀಡಿ ಕಾರ್ಮಿಕರ ವೆಲ್‌ಫೇರ್ ಫಂಡಿನಿಂದ ಮಂಗಳೂರಿನಲ್ಲಿ ಟಿ.ಬಿ. ಆಸ್ಪತ್ರೆಯನ್ನು ತೆರೆಯಬೇಕು. ಮನೆ ಕಟ್ಟಿಸಿಕೊಳ್ಳಲು ಸಾಲ ಮತ್ತು ಸಹಾಯಧನವನ್ನು ಹೆಚ್ಚಿಸಬೇಕು. ಹಾಗೂ ಸಂಚಾರಿ ವಾಹನದ ಮುಖಾಂತರ ಸಿಗುತ್ತಿರುವ ಔಷಧಿ ಸೌಲಭ್ಯಗಳನ್ನು ಅದರ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕು. ಇವೇ ಪ್ರಮುಖವಾದ ಬೇಡಿಕೆಗಳನ್ನು ಮುಂದಿಟ್ಟು ಅಕ್ಟೋಬರ್ ತಿಂಗಳಲ್ಲಿ ಹೋರಾಟ ನಡೆಸಬೇಕೆಂದು ತೀರ್ಮಾನಿಸಿ, ಪೂರ್ವ ತಯಾರಿಗಳನ್ನು ನಡೆಸಿಕೊಳ್ಳಲು ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಕಾ|| ಲೋಕಯ್ಯ ಶೆಟ್ಟರು ವಹಿಸಿದ್ದರು. ಜಿಲ್ಲಾ ಬೀಡಿ ಫೆಡರೇಶನ್‌ನ ಕಾರ್ಯದರ್ಶಿ ಯು. ಬಿ. ಲೋಕಯ್ಯ ನವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಆರಂಭದಲ್ಲಿ ಕಾ|| ಜೆ. ವೀರಪ್ಪ ಸ್ವಾಗತಿಸಿದರು.

ಯಶಸ್ವೀ ಧರಣಿ ಸತ್ಯಾಗ್ರಹ

ಅಲ್ ಇಂಡಿಯಾ ಕಿಸಾನ್ ಸಭಾದ ಕರೆಯ ಮೇರೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯು 24-9-84 ರಿಂದ 29-9-84 ರ ವರೆಗೆ ಹಲವಾರು ಸಭೆಗಳನ್ನು ನಡೆಸಿ ರೈತರ ಬೇಡಿಕೆಗಳ ಪ್ರಚಾರ ನಡೆಸಲಾಯಿತು.

29-9-84 ರಂದು ಜಿಲ್ಲೆಯ ರೈತರು ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಮೆರವಣಿಗೆಯಲ್ಲಿ ಹೊರಟು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಸತತವಾಗಿ ಮಳೆ ಬೀಳುತ್ತಿದ್ದರೂ ಮಹಿಳೆಯರೂ ಸೇರಿದಂತೆ ಎಲ್ಲಾ ಸತ್ಯಾಗ್ರಹಿಗಳು ಮಳೆಯಲ್ಲೆ ಕುಳಿತು ಬೇಡಿಕೆಗಳಿಗಾಗಿ ಒತ್ತಾಯಿಸಿ ಘೋಷಣೆ ಕೂಗುತ್ತಿದ್ದುದು ಸ್ಫೂರ್ತಿದಾಯಕವಾಗಿತ್ತು.

ನಂತರ ಎಸ್. ಸೂರ್ಯನಾರಾಯಣ ರಾವ್, ಜಗನ್ನಾಥ್, ರಾಮಭದ್ರಯ್ಯ, ಲಕ್ಕಣ್ಣನವರ ನೇತೃತ್ವದಲ್ಲಿ ನಿಯೋಗವು ಜಿಲ್ಲಾಧಿಕಾರಿಯವರನ್ನು ಭೇಟಿನಾಡಿ ಬೇಡಿಕೆಗಳ ಮನವಿ ಪತ್ರವನ್ನು ಅರ್ಪಿಸಲಾಯಿತು. ನಿಯೋಗಕ್ಕೆ ಜಿಲ್ಲಾಧಿಕಾರಿಯವರು ತನ್ನಿಂದ ಬಗೆಹರಿಯ ಬಹುದಾದ ಬೇಡಿಕೆಗಳನ್ನು ಈಡೇರಿಸುವುದಾಗಿ ಹೇಳಿ ಉಳಿದ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿ ಹೇಳಿದರು. ಮನವಿಯಲ್ಲಿದ್ದ ಕೆಲವು ಬೇಡಿಕೆಗಳು ಈ ಕೆಳಕಂಡಂತಿವೆ.

ಬೆಂಗಳೂರು ಜಿಲ್ಲೆಯಲ್ಲಿ ಸಮಯಕ್ಕೆ ಸರಿಯಾಗಿ ಮಳೆ ಬಾರದೆ ಇದ್ದು ಈಗಾಗಲೇ ಕೆಲವು ತಾಲ್ಲೂಕಿನ ಕೆಲವುಪ್ರದೇಶಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿದ್ದರೂ ಇನ್ನುಳಿದ ಎಲ್ಲಾ ಪ್ರದೇಶಗಳನ್ನು ಬರಗಾಲ ಪೀಡಿತವೆಂದು ಘೋಷಿಸಿ ಈ ಕೂಡಲೇ ಪರಿಹಾರ ಕಾಮಗಾರಿಗಳನ್ನು ಆರಂಭಿಸಿ ಗ್ರಾಮಾಂತರ ಪ್ರದೇಶದ ಬಡ ಜನರಿಗೆ ಕೆಲಸ ಒದಗಿಸುವುದು. ಅಲ್ಲದೆ ಬರಗರಿಹಾರ ಕಾಮಗಾರಿಗಳಲ್ಲಿ ಕೆಲಸ ಮಾಡುವವರಿಗೆ 10 ರೂ. ಕೂಲಿ ನಿಗದಿ ಮಾಡುವುದು.

ಸರ್ಕಾರಿ ಬಂಜರು ಭೂಮಿಯಲ್ಲಿ ಬೇಸಾಯ ಮಾಡುತ್ತಿರುವ ರೈತರಿಗೆ ಈ ಕೂಡಲೇ ಹಕ್ಕು ಪತ್ರ ನೀಡುವುದು.

ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾರಿ ಮಾಡುವಂತೆ ಅಧಿಕಾರಿಗಳನ್ನು ನೇಮಿಸಿ ಜಾರಿಗೊಳಿಸುವುದು.

ರೈತರು ಕೊಳ್ಳುವ ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತವಾಗಿರುವುದರಿಂದ ರೈತರು ಬೆಳೆದ ಬೆಳೆಗೆ ಲಾಭದಾಯಕ ಬೆಲೆ ನೀಡಬೇಕು.

ಹಳ್ಳಿ ಪಟ್ಟಣಗಳೆಂಬ ಬೇಧವಿಲ್ಲದೆ ಪಡಿತರ ಪದ್ಧತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿಯೂ ಜಾರಿಗೆ ತರಬೇಕು.

ಐ. ಆರ್. ಡಿ. ಪಿ. ಅಂತ್ಯೋದಯ ಯೋಜನೆಯ ಸಾಲವಿತರಣೆಯಲ್ಲಿ ಆಗುತ್ತಿರುವ ಲೋಪದೋಷಗಳನ್ನು ಸರಿಪಡಿಸಬೇಕು. ಅಲ್ಲದೆ ಭಾಗ್ಯ ಜ್ಯೋತಿ ಯೋಜನೆಯಲ್ಲಿ ಕಂಟ್ರ್ಯಾಕ್ಟರುಗಳ ವಿಳಂಬ ನೀತಿ ನಿಲ್ಲಬೇಕು.

ಭೂ ನ್ಯಾಯ ಮಂಡಳಿ, ಭೂ ವಿತರಣಾ ಸಮಿತಿಗಳಲ್ಲಿ ರೈತ ಸಂಘದ ಪ್ರತಿನಿಧಿಗಳನ್ನು ನೇಮಿಸಬೇಕು.

ನಿರಂಜನರ "ಚಿರಸ್ಮರಣೆ" ಕಾದಂಬರಿ ಬೆಳ್ಳಿ ತೆರೆಗೆ

ಕಯ್ಯೂರಿನ ರೈತರ ಧೀರೋದಾತ್ತ ಹೋರಾಟವನ್ನು ಚಲನಚಿತ್ರವನ್ನಾಗಿ ಕನ್ನಡ ಮತ್ತು ಮಲಯಾಳಂ ಭಾಷೆಗಳಲ್ಲಿ "ಜನಶಕ್ತಿ ಫಿಲಂಸ್" ತಯಾರಿಸಲಿದೆ. ಈ ಸುದ್ದಿಯನ್ನು ಜನಶಕ್ತಿ ಫಿಲಂಸ್‌ನ ಡೈರೆಕ್ಟರುಗಳಾದ ಕೆ. ಚಾತುನ್ನಿ ಮಾಸ್ಟರ್ ಎಂ.ಪಿ. ಮತ್ತು ಪ್ರೊ. ಕೆ. ಸಿ. ಚಾಕೋ, ಪಿ. ಜಯಬಾಲ ಮೆನನ್, ಪಿ. ಎಂ. ಬಾರೆಲ್‌ರವರುಗಳು ಪ್ರಕಟನೆಯಲ್ಲಿ ತಿಳಿಸಿದ್ದಾರೆ. ಕನ್ನಡದ ಹೆಸರಾಂತ ಸಾಹಿತಿ "ನಿರಂಜನ" ರವರ "ಚಿರಸ್ಮರಣೆ" ಕಾದಂಬರಿ ಇದರ ಕಥಾವಸ್ತು. 1940 ರ ಕಯ್ಯೂರಿನ ಹೋರಾಟದ ಸಮಯದಲ್ಲಿ ನಿರಂಜನರವರು ನೀಲೇಶ್ವರದಲ್ಲಿ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದರು.

ಕನ್ನಡ ಭಾಷೆಯಲ್ಲಿ ಈ ಚಿತ್ರದ ನಿರ್ದೇಶಕರು ಪಿ. ವಿ. ನಂಜರಾಜೇ ಅರಸ್‌ರವರು. ಈ ಹಿಂದೆ ಅರಸ್‌ರವರು 'ಸಂಕಲ್ಪ' ಚಿತ್ರವನ್ನು ನಿರ್ದೇಶಿಸಿದ್ದರು. ಈ ಚಿತ್ರಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರಶಸ್ತಿ ಸಿಕ್ಕಿದೆ. ಈಗ ಅರಸ್‌ರವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದಾರೆ. ನಿರಂಜನರ 'ಚಿರಸ್ಮರಣೆ'ಯ ಕಥಾ ವಸ್ತುವುಳ್ಳ ಈ ಚಿತ್ರವನ್ನು ನಿರ್ದೇಶಿಸಲು ನನಗೆ ತುಂಬಾ ಸಂತೋಷವಾಗುತ್ತದೆ ಎಂದು ಅರಸ್‌ರವರು ಸುದ್ದಿಗಾರರ ಜೊತೆ ಹೇಳಿದ್ದಾರೆ. ನವಂಬರ್ ಮೊದಲವಾರದಲ್ಲಿ ಚಿತ್ರದಚಿತ್ರೀಕರಣ ಪ್ರಾರಂಭವಾಗುತ್ತದೆ. ಮಾರ್ಚ್ ವೇಳೆಗೆ ಚಿತ್ರ ಪೂರ್ಣಗೊಳ್ಳುತ್ತದೆ.

ಕನ್ನಡದ ಚಲನಚಿತ್ರ ನಟರಾದ ಅಶೋಕ್, ಜಯಂತಿ, ಆರತಿ ಜೊಂಮನ ದುಡಿಯ ವಾಸುದೇವರಾವ್‌ರವರುಗಳು ಚಿತ್ರದಲ್ಲಿ ನಟಿಸಲು ಆಯ್ಕೆಯಾಗಿದ್ದಾರೆ. ಈ ಚಿತ್ರಕ್ಕೆ ಸುಮಾರು 13 ಲಕ್ಷ ವೆಚ್ಚವಾಗುವುದು ಮಲೆಯಾಳಂ ಭಾಷೆಯ ನಿರ್ದೇಶಕರು ಯಾರೆಂದು ಇನ್ನೂ ನಿರ್ಧಾರವಾಗಿಲ್ಲ. ನವಂಬರ್ ವೇಳೆಗೆ ಮಲೆಯಾಳಂ ಭಾಷೆಯಲ್ಲಿ ಚಿತ್ರ ತಯಾರಿಕೆಯ ಕೆಲಸ ಪ್ರಾರಂಭವಾಗುವುದು ಎಂದು ಚಾತುನ್ನಿ ಮಾಸ್ಟರ್ ತಿಳಿಸಿದ್ದಾರೆ.

ಸಿ. ಐ. ಟಿ. ಯು. ಜನರಲ್ ಕೌನ್ಸಿಲ್‌ನ ನಿರ್ಣಯ

ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕರ ಚಳುವಳಿ

ಮುಂದುವರಿದ ಬಂಡವಾಳ ಶಾಹಿ ದೇಶಗಳಲ್ಲಿಯು ಕಾ ರ್ಮಿ ಕ ವರ್ಗ, ನಿರುದ್ಯೋಗ, ಅತಿಪ್ರಸರಣ, ಸಾಮಾಜಿಕ ರಕ್ಷಣೆಯ ಕ್ರಮಗಳಲ್ಲಿ ಕಡಿತ, ಕಾರ್ಮಿಕ ಸಂಘಟನೆಯ ಹಕ್ಕುಗಳ ಮೇಲೆ ಆಕ್ರಮಣ ಹಾಗೂ ವಿಶ್ವಶಾಂತಿಗಾಗಿ ನಡೆಸುತ್ತಿರುವ ತೀವ್ರತರದ, ಧೃಢವಾದ ಐಕ್ಯ ಹೋರಾಟಕ್ಕೆ ಸಿ. ಐ. ಟಿ. ಯು. ಜ ನ ರ ಲ್ ಕೌನ್ಸಿಲ್ ಸಂಪೂರ್ಣ ಬೆಂಬಲ ನೀಡುತ್ತದೆ.

ಯುದ್ಧ ವಿರೋಧಿ ಚಳುವಳಿಯ ಹಿನ್ನೆಲೆಯಲ್ಲಿ ವರ್ಗ ಹೋರಾಟ ತೀವ್ರಗೊಳ್ಳುತ್ತಿರುವುದೇ ಈ ಚಳುವಳಿಯ ಗುಣಾತ್ಮಕ ಸ್ವರೂಪವಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಬೇಡಿಕೆಗಳೆಲ್ಲ ಗುತ್ತೇದಾರಿ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಬೇ ಡಿ ಕೆ ಗ ಳ ಲ್ಲಿ ಹಾಗೆಯೇ ಅಮೇರಿಕದ ನೇತೃತ್ವದಲ್ಲಿ ಸಾಮ್ರಾಜ್ಯ ಶಾಹಿಗಳ ಮಧ್ಯ ಪ್ರವೇಶದಿಂದ ಪ್ರಜಾಪ್ರಭುತ್ವ ಹ ಕ್ಕು ಗ ಳ ಮತ್ತು ಸ್ವಾತಂತ್ರ್ಯ ರಕ್ಷಣೆಯಲ್ಲಿ ಸೇರಿಕೊಂಡಿವೆ. ತಮ್ಮ ಜೀವನ ಮಟ್ಟದ ಮೇಲೆ ಗುತ್ತೇದಾರಿಗಳು ನಡೆಸುತ್ತಿರುವ ಆಕ್ರಮಣಕ್ಕೂ, ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಶಸ್ತ್ರಾಸ್ತ್ರಗಳ ಸಂಗ್ರಹಕ್ಕೂ, ಅವರ ತೀ ವ್ರ ವಾ ದಿ ವಿದೇಶಿ ಧೋ ೕ ರ ಣೆ ಗೂ ನೇರವಾದ ಸಂಬಂಧವಿದೆಂಬುದನ್ನು ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗ ತಿಳಿದುಕೊಳ್ಳುತ್ತೆಂಬ ಅಂಶವನ್ನು ಈ ಹೋರಾಟಗಳು ತೋರಿಸಿ ಕೊಡುತ್ತವೆ. ಅತಿ ಪ್ರಸರಣ ಇಮ್ಮಡಿಯಾಗುತ್ತಿರುವಾಗ ನಿರುದ್ಯೋಗಿಗಳ ಸಂಖ್ಯೆ ಆ ರಾಜ್ಯಗಳಲ್ಲಿ 350 ಮಿಲಿಯ ಮೀರುತ್ತಿರುವಾಗ, ತೀವ್ರಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟಿನ ಭಾರವನ್ನು ಕಾರ್ಮಿಕ ವರ್ಗದ ಮೇಲೆ ಹೇರುವ ದುರುದ್ದೇಶದಿಂದ ಕಾರ್ಖಾನೆಗಳ ಮುಚ್ಚುವಿಕೆಯು ಕಾರ್ಮಿಕರ ಮೇಲೆ ನಡೆಯುತ್ತಿರುವ ನಿರಂತರ ದಬ್ಬಾಳಿಕೆಯಾಗಿದೆ. ಈ ಬಿಕ್ಕಟ್ಟಿನಿಂದ ಪಾರಾಗಲು ಬಂಡವಾಳ ಶಾಹಿ ಸರಕಾರಗಳು ಸೈನಿಕೀಕರಣಕ್ಕೂ ಸೈನಿಕ ಶಸ್ತ್ರಾಸ್ತ್ರಗಳ ಕೈಗಾರಿಕೆಗಳ ಲಾಭ ಹೆಚ್ಚಳಕ್ಕೂ ತೊಡಗಿದ್ದಾರೆ. ಅಮೇರಿಕದಲ್ಲಿ ಸೈನಿಕರ ಕೈಗಾರಿಕ ಕೇಂದ್ರದಲ್ಲಿ 15 ಮಿಲಿಯದಷ್ಟು ನಿರುದ್ಯೋಗಿಗಳ ಸಂಖ್ಯೆ ಹೆ ಚ್ಚಾ ಗಿ ದೆ. ಹಾಗೂ ಶೇ. 15 ರಷ್ಟು ಜನತೆ ಬಡತನದ ರೇಖೆಗಿಂತ ಕೆಳಗಿಳಿದಿದ್ದಾರೆ.

ಹೋದ ಮಾರ್ಚ್ ತಿಂ ಗ ಳ ಲ್ಲಿ ಪ್ರಾರಂಭವಾದ ಇಂಗ್ಲೆಂಡಿನ ಕಲ್ಲಿದ್ದಲು ಕೆಲ ಸ ಗಾ ರರ ಮುಷ್ಕರ, ಪಶ್ಚಿಮ ಯೂರೋಪಿನಲ್ಲಿ ಅತಿ ದೀರ್ಘ ಕಾಲದ್ದಾಗಿದೆ. ಗ ಣಿ ಯ ಮುಚ್ಚುವಿಕೆ ಮತ್ತು 20,000 ಜನರನ್ನು ಕೆಲಸದಿಂದ ತೆಗದು ಹಾಕುವುದರ ವಿರುದ್ದ 2 ಲಕ್ಷ ಕಲ್ಲಿದ್ಧಲು ಕೆಲಸಗಾರರ ಧೀರ ಹೋರಾಟ ಬಂದರು ಹಾಗೂ ಇತರ ಕಾರ್ಮಿಕ ವರ್ಗದಲ್ಲಿ ಹೊಸ ಚೈತನ್ಯ ತುಂಬಿದೆ. ಸಶಸ್ತ್ರ ಪೋಲೀಸರ ಅಮಾನುಷ ದಬ್ಬಾಳಿಕೆಯನ್ನೆದುರಿಸುತ್ತಾ, ಕೆಲಸಗಾರರೆಲ್ಲ ತಮ್ಮ ನೌಕರಿಯನ್ನಷ್ಟೆ ಉಳಿಸಿ ಕೊಳ್ಳುವುದಲ್ಲಿ, ರಾಷ್ಟ್ರೀ ಕೃತ ಕೈಗಾಕೆಯನ್ನು ಖಾಸಗೀ ಮಾಲಕರಿಗೆ ಒಪ್ಪಿಸುವುದನ್ನು ವಿರೋಧಿಸಿದ್ದಾರೆ. ಇದರಂತೆಯೇ ಬಂಡವಾಳ ಶಾಹಿ ಸಮಾಜವನ್ನು ಸಂಪೂರ್ಣದಾಗಿ ನಡುಗಿಸಿದ ಮತ್ತೊಂದು ಘಟನೆ ಯಾವುದೆಂದರೆ ಹೆಚ್ಚು ಕೆಲಸದ ಅವಕಾಶ ಉಂಟು ಮಾಡುವ ಸಲುವಾಗಿ 5 ಗಂಟೆಯ ಕೆಲಸ ಬೇಕೆಂದು ಪಶ್ಚಿಮ ಜರ್ಮನಿಯಲ್ಲಿಯ ಉಕ್ಕು ಕೆಲಸಗಾರರ ಹೋರಾಟ ಒಂದು ವರ್ಷಕ್ಕಿಂತಲೂ ಮೇಲ್ಪಟ್ಟು ನಡೆಯುತ್ತಿರುವ ಅಮೇರಿಕದ ತಾಮ್ರ ಕೆಲಸಗಾರರ ಮುಷ್ಕರ, ಬೆಲ್ಜಿಯಂನಲ್ಲಿ ಉಕ್ಕು, ಬಂದರು, ವಿಮಾನ ಶಾಲೆ ಮಾಸ್ತರ, ಸರಕಾರ ನೌಕರರ ದಾರರು ಮೊದಲಾದವರ ಮುಷ್ಕರದ ಅಲೆಗಳು, ಗ್ರೀಸ್—ಸ್ಪೈನ್‌ಗಳಲ್ಲಿ ಹಡಗುತಯಾರಕರ ಸಂಪು, ಗಣಿ ಮತ್ತು ಫರ್ನೇಸ್ ಮುಚ್ಚುವಿಕೆಯ ವಿರುದ್ಧ ಫ್ರಾನ್ಸಿನಲ್ಲಿ ಚಳುವಳಿ, ಡೆನ್ಮಾರ್ಕಿನಲ್ಲಿ ಸಾರ್ವಜನಿಕ ಮುಷ್ಕರಗಳು, ಸೈನಿಕೀರಕಣದ ವಿರುದ್ಧವೂ ಹಲವಾರು ಮುಷ್ಕರಗಳು ನಡೆದಿವೆ. ಪೋಲೀಸರ ದಬ್ಬಾಳಿಕೆಯನ್ನೆದುರಿಸಿಯೇ ಈ ಮುಷ್ಕರಗಳು ಧೈರ್ಯದಿಂದ ಮುಂದುವರಿಯುತ್ತಿರುವುದು ಈಗಿನ ಕಾಲದ ವೈಶಿಷ್ಟವಾಗಿದೆ.

ಕಾರ್ಮಿಕ ವರ್ಗದ ಮೇಲೆ ಸಹಿಸಲಾರದಂಥ ದಬ್ಬಾಳಿಕೆಯನ್ನು ನಡೆಸುತ್ತಿರುವುದಕ್ಕಾಗಿ ಬಂಡವಾಳ ಶಾಹಿ ದೇಶಗಳ ಆಳುವವರನ್ನು ಜೈಪುರದಲ್ಲಿ ಸೇರಿದ ಜನರಲ್ ಕೌನ್ಸಿಲಿನ ಸಭೆಖಂಡಿಸುವುದಲ್ಲದೆ, ಆ ದೇಶಗಳಲ್ಲಿಹೋರಾಟಮಾಡುತ್ತಿರುವ ಕಾರ್ಮಿಕ ವರ್ಗಕ್ಕೆ ಸಂಪೂರ್ಣ ಬೆಂಬಲ ಸಹಾನುಭೂತಿ ವ್ಯಕ್ತ ಮಾಡುತ್ತದೆ.

(ಜೈಪುರ ಸಿ.ಐ.ಟಿ.ಯು. ಕೌನ್ಸಿಲ್ ಸಭೆಯಲ್ಲಿ ಪಾಸಾದ ನಿರ್ಣಯ)

ದೇಶ ಗಂಡಾಂತರದ ಅಂಚಿನಲ್ಲಿ

(1ನೇ ಪುಟದಿಂದ)

ಮತ ಪ್ರದರ್ಶಿಸಲು ದಂಗೆಗೆ ಕಾರಣೀಭೂತರೆಂದು ಬಂಧಿತರಾಗಿದ್ದ ಮಜಲೀಸ್ ಶಾಸಕರನ್ನು ಬಿಡುಗಡೆ ಮಾಡಿದ್ದರು. ಮತೀಯ ಗಲಭೆಯಲ್ಲಿ ಸಕ್ರಿಯವಾಗಿ ಪಾ ಲ್ಗೊಂ ಡ ವರನ್ನು, ಪ್ರಚೋದನೆ ನೀಡುವವರನ್ನೆಲ್ಲ ಬಂಧನದಲ್ಲಿಡುವುದೂ ತಾವೇ, ತಮ್ಮ ರಾಜಕೀಯ ಲಾಭಕ್ಕಾಗಿ ಅವರನ್ನೆಲ್ಲ ಬಿಡುಗಡೆ ಮಾಡುವವರೂ ತಾವೇ.

ಹೀಗೆ ಒಂದು ಕಡೆ ಅಮೇರಿಕದ ಹಾಗೆಯೇ ಇತರ ಸಾಮ್ರಾಜ್ಯಶಾಹಿ, ಬಂಡವಲದಾರಿ, ಜಾ ತೀ ಯವಾದಿ ವಿದೇಶಿ ಶಕ್ತಿಗಳು ಭಾರತ ದೇಶವನ್ನು ಬಲಹೀನಗೊಳಿಸಲು, ಐಕ್ಯತೆಯನ್ನು ಪುಡಿ ಪುಡಿ ಮಾಡಲು ಸರ್ವ ವಿಧದ ಪ್ರಯತ್ನ ನಡೆಸಿರುವಾಗ, ಕಾಂಗ್ರೆಸ್ಸಿನ 35 ವರ್ಷಗಳ ಆಡಳಿತೆ ಜನರ ಸಮಸ್ಯೆಗಳನ್ನು ಬಗೆಹರಿಸಲು ಅಸಮರ್ಥವಾಗಿ ದೇಶದಲ್ಲಿ ಅಸಮಾಧಾನ, ಚಳುವಳಿ, ಪ್ರಕ್ಷೋಭೆ ಬೆಳೆದು ಬರುತ್ತಿರುವಾಗ ನಮ್ಮ ದೇಶದಲ್ಲಿರುವ ಜಾತೀಯ-ಮತೀಯ ವಿಚ್ಛಿದ್ರಕಾರಿ ಶಕ್ತಿಗಳು ವಿದೇಶೀಯ ಹಣದ ಪ್ರಭಾವದಿಂದಲೂ ಆಳುವ ಪಕ್ಷದ ಅಪ್ರತ್ಯಕ್ಷ ಸಹಾಯ-ಪ್ರೋತ್ಸಾಹದಿಂದಲೂ ಇಡೀ ದೇಶವನ್ನು ಗಂಡಾಂತರದ ಮಡುವಿನೆಡೆ ತಳ್ಳುತ್ತಿರುವ ಅಪಾಯಕಾರೀ ದೃಶ್ಯ ಎದ್ದು ಕಾಣುತ್ತಿದೆ.

ಇದು ಅಪಾಯಕಾರಿಯಾದ ಸಂಧಿಗ್ದ ಪರಿಸ್ಥಿತಿ. ಸಿ.ಪಿ.ಐ. (ಎಂ) ಕಾರ್ಯಕ್ರಮ ಹೇಳುವಂತೆ "ಜಾತ್ಯಾತೀತ ತತ್ವಗಳ ಸ್ಥಿರವಾದ ಅನುಷ್ಠಾನಕ್ಕಾಗಿ ನಿರ್ದಾಕ್ಷಿಣ್ಯವಾಗಿ ಹೋರಾಟ ನಡೆಸುವುದು ನಮ್ಮ ಪಕ್ಷದ ಕರ್ತವ್ಯವಾಗಿದೆ. ಆ ತತ್ವದಿಂದ ಕಿಂಚಿತ್ ವಿಚಲಿತವಾದರೂ ಕೂಡ ಅದನ್ನು ಬಯಲುಗೊಳಿಸಿ ಹೋರಾಟ ಮಾಡಬೇಕು." ಜೈಪುರದಲ್ಲಿ ನಡೆದ ಸಿ.ಐ.ಟಿ.ಯು. ಜನರಲ್ ಕೌನ್ಸಿಲಿನಲ್ಲಿ ಕಾ|| ಬಿ. ಟಿ. ರಣದಿವೆಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕೂಡ ಈ ವಿಷಯದ ಕುರಿತು ಪ್ರಸ್ತಾಪಿಸಿ, ಸಂಘಟಿತ ಕಾರ್ಮಿಕ ವರ್ಗ ಅಂಥ ಶಕ್ತಿಗಳನ್ನೆದುರಿಸುವಲ್ಲಿ ಮತೀಯ-ಜಾತೀಯ ಸೌ ಹಾ ರ್ದತೆ ಕಾಪಾಡಿಕೊಳ್ಳುವುದರಲ್ಲಿ ಹೇಗೆ ವಿಫಲವಾಗಿದೆಂದು ಹೇಳಿ, ಕಾರ್ಮಿಕ ವರ್ಗದ ಐಕ್ಯತೆಯ ಬುಡವನ್ನೇ ಇದು ನಾಶ ಮಾಡುತ್ತಿರುವುದರಿಂದ, ಅ ೦ ಥ ಮತೀಯ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಆದ್ಯತೆ ನೀಡುವ ತುರ್ತು ಅಗತ್ಯವನ್ನು ಒತ್ತಿ ಹೇಳಿದ್ದರು.

ಇಂಥ ಗಂಭೀರ ಪರಿಸ್ಥಿತಿಯಲ್ಲಿ ಸಿ.ಪಿ.ಐ. [ಎಂ] ಸದಸ್ಯರೂ ಹಿತೈಷಿಗಳೂ, ಸಾಮೂಹಿಕ ಸಂಘಟನೆಗಳೂ, ಪ್ರಜಾಪ್ರಭುತ್ವವಾದಿ ಶ ಕ್ತಿ ಗಳೂ ಸಾಮ್ರಾಜ್ಯಶಾಹಿಗಳ, ಛಿದ್ರಕಾರಿ ಶಕ್ತಿಗಳ ವಿರುದ್ಧ ಅತ್ಯಂತ ಎಚ್ಚರಿಕೆಯಿಂದ ಮುತುವರ್ಜಿಯಿಂದ ಹೋರಾಡುವುದು ಅತ್ಯಗತ್ಯವೆಂದು ಹೇಳಲು ಇಚ್ಛಿಸುತ್ತೇವೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಗಾಂಧಿಯ ಸರ್ವಾಧಿಕಾರೀ ಆ ಡ ಳಿ ತೆ ಯ ನ್ನು ಸೋಲಿಸುವ ಆದ್ಯಕರ್ತವ್ಯದ ಜೊತೆಯಲ್ಲಿಯೇ, ಸಾಮ್ರಾಜ್ಯಶಾಹಿಗಳ, ಛಿದ್ರಕಾರಿ ಶಕ್ತಿಗಳ, ಮತೀಯವಾದಿಗಳ ವಿರುದ್ಧ ಸತತ ಹೋರಾಟ ನಡೆಸುವುದೂ ಅತ್ಯಗತ್ಯವೆಂಬುದನ್ನು ಎಲ್ಲರೂ ಅರಿತು ಕೊಳ್ಳುವುದು ಅತ್ಯಗತ್ಯ.

ಎನ್. ಕೆ. ಉಪಾಧ್ಯಾಯ

ಲೊ ವೋಲ್ಟೇಜ್ ಸಮಸ್ಯೆ – ಅ. 26 ರಂದು ಪ್ರತಿಭಟನೆ

ಮಂಗಳೂರು ತಾಲೂಕಿನ ಉಳ್ಳಾಲ ವಿಧಾನ ಸಭಾ ಕ್ಷೇತ್ರದಾದ್ಯಂತ ಲೋ ವೋಲ್ಟೇಜ್ ನಿಂದಾಗಿ ಅರ್ಧ ರಾತ್ರಿಯವರೆಗೆ ವಿದ್ಯುದ್ದೀಪಗಳು ಸರಿಯಾಗಿ ಉರಿಯದೆ ಜನಸಾಮಾನ್ಯರೂ, ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳೂ ಅತ್ಯಂತ ಕಷ್ಟಕ್ಕೆ ಒಳಗಾಗಿದ್ದು, ಈ ಕುರಿತು ಮಾಡಿಕೊಂಡ ಮನವಿಗಳಿಗೆ ಈ ತನಕ ಅನುಕೂಲಕರ ಪ್ರತಿಕ್ರಿಯೆ ಬಾರದುದರಿಂದ ಅಕ್ಟೋಬರ್ 26 ರಂದು ಮಂಗಳೂರಿನ ಕೆ. ಇ. ಬಿ. ಎಕ್ಸಿಕ್ಯೂಟಿವ್ ಇಂ ಜಿ ನಿ ಯ ರ್‌ರ ಕಛೇರಿಯ ಮುಂದೆ ಸಾಮೂಹಿಕ ಸತ್ಯಾಗ್ರಹ ನಡೆಸಲು ಸಿ. ಪಿ. ಇ. [ಎಂ] ಮಂಗಳೂರು ತಾಲೂಕು ಸಮಿತಿಯು ತೀರ್ಮಾನಿಸಿದೆ. ಸಾಕಷ್ಟು ಶಕ್ತಿಯ ಟ್ರಾನ್ಸ್‌ಫಾರ್ಮರುಗಳನ್ನು ಸ್ಥಾಪಿಸಿ, ಸೆಪ್ಟಂಬರ್ ತಿಂಗಳ ಕೊನೆಯೊಳಗೆ ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ಈ ಹಿಂದೆ ಪಕ್ಷವು ಒತ್ತಾಯಿಸಿದರೂ ಸಂಬಂಧಪಟ್ಟ ಅಧಿಕಾರಿಗಳು ಇನ್ನೂ ಅಸಡ್ಡೆ ಮನೋಭಾವವನ್ನು ಮುಂದುವರಿಸುತ್ತಿರುವುದನ್ನೂ ತಾ : 6 ರಂದು ಸಭೆ ಸೇರಿದ ತಾಲೂಕು ಸಮಿತಿಯ ಸಭೆಯು ತೀವ್ರವಾಗಿ ಖಂಡಿಸಿದೆ. ಅಕ್ಟೋಬರ್ 26 ರಂದು ಸತ್ಯಾಗ್ರಹದಲ್ಲಿ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪಕ್ಷದ ಎಲ್ಲಾ ಕಾರ್ಯಕರ್ತರನ್ನೂ ಕಾರ್ಮಿಕ, ರೈತ, ವಿದ್ಯಾರ್ಥಿ ಯುವಜನ ಬಂಧುಗಳನ್ನೂ ಸಿ. ಪಿ. ಐ. (ಎಂ] ಮಂಗಳೂರು ತಾಲೂಕು ಸಮಿತಿಯ ಕಾರ್ಯದರ್ಶಿ ಯು. ಜನಾರ್ಧನ ನಾಯಕರು ವಿನಂತಿಸಿದ್ದಾರೆ.

ಬೀಡಿ ಕಾರ್ಮಿಕರ ಸಭೆ

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ 9-10-84 ರಂದು ಅಧ್ಯಕ್ಷರಾದ ಕೆ. ಮುಂಡಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ತಾರೀಕು 18-10-84 ರಂದು ಜಿಲ್ಲಾಧಿಕಾರಿ ಕಛೇರಿ ಮುಂದೆ ನಡೆಯುವ ಬೀಡಿ ಮಜೂರರ ಸತ್ಯಾಗ್ರಹಕ್ಕೆ ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘವು ಸಂ ಪೂ ರ್ಣ ಬೆಂಬಲ ನೀಡಬೇಕೆಂದು ಕರೆ ಕೊಟ್ಟಿದೆ. ಅಂದಿನ ಹೋರಾಟಕ್ಕೆ ಬೀಡಿ ಮಜೂರರು ಸಂಪೂರ್ಣ ಮುಷ್ಕರದಲ್ಲಿ ಭಾಗವಹಿಸಿ ಜಿಲ್ಲಾಧಿಕಾರಿಗಳ ಕಛೇರಿಗೆ ಬರಬೇಕೆಂದು ಸಂಘದ ಕಾ ರ್ಯ ದ ರ್ಶಿಯಾದ ಕೆ. ಗಂಗಯ್ಯ ಮಜೂರರಿಗೆ ಕರೆ ಕೊಟ್ಟಿದ್ದಾರೆ.

ತುಮಕೂರು

ಎಸ್. ಎಫ್. ಐ. ಸಮಿತಿ ರಚನೆ

ತುಮಕೂರು ನಗರ ಸಂಘಟನಾ ಸಮಿತಿಯನ್ನು 1-10-14 ರಂದು ಸೇರಿದ ವಿದ್ಯಾರ್ಥಿಗಳ ಸಭೆಯಲ್ಲಿ ರಚಿಸಲಾಯಿತು. ಸಭೆಯಲ್ಲಿ ಎಸ್. ಎಫ್. ಐ. ನ ರಾಜ್ಯ ಉಪಾಧ್ಯಕ್ಷರಾದ ಎನ್. ರಾಜಣ್ಣನವರು ಸಂಘಟನೆಯ ಧ್ಯೇಯ ಧೋರಣೆ ಕುರಿತು ಮಾತನಾಡಿದರು. ಕ್ಯಾಪಿಟೇಷನ್, ಡೋನೇಷನ್ ಫೀ ಪದ್ಧತಿಯ ರದ್ದತಿ ಹಾಗೂ ಖಾಸಗಿಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣಗೊಳಿಸಲು ಒತ್ತಾಯಿಸಿದರು. ವಿದ್ಯಾರ್ಥಿ ಸಮುದಾಯದ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಯು.ಜಿ.ಸಿ. ಕರಾಳ ಕಾಯ್ದೆಯನ್ನು ಹಿಂತೆಗೆದುಕೊಳ್ಳಲು ಕರೆ ನೀಡಿದರು. ಸಭೆಯು ಬಿ. ಸಿ. ಮೋಹನ್‌ಕುಮಾರ್ ಹಾಗೂ ಸಂತಾನ ಕೃಷ್ಣ ರವರನ್ನು ಸಂಚಾಲಕರುಗಳನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು .ಶ್ರೀ ಸುದೀಂದ್ರ, ಜಿ. ಮಡಿಕೇರಿ, ಎನ್. ವೆಂಕ್ಟೇಶ್‌ಮೂರ್ತಿ, ವಾಲ್ದರ್, ಅನಿಲ್‌ಕುಮಾರ್ ಸಿಂಗ್, ಶ್ರೀನಿವಾಸ್, ಆರ್. ಕ್ಷೀರಕುಮಾರ ಸ್ವಾಮಿಗಳನ್ನು ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore 560052 Editoral and managerial office, L-56, K. V. Temple Street. Sultanpet. B-53 Phone : 24154
Editor ; P. Ramachandra Rao Managing Editor : N. K. Upadhyaya